
ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾವಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 1 ಸಂಚಿಕೆ : 8 ಜುಲೈ 16 ರಿಂದ 31–1997 ಪುಟಗಳು : 24 ರೂ. 5



(ಚಿತ್ರ : ಹರವು ದೇವೇಗೌಡ)

ನೇಗಿಲ ಕುಲದೊಳು ಅಡಗಿದೆ ಕರ್ಮ

ನೇಗಿಲ ಮೇಲೆ ನಿಂತಿದೆ ಧರ್ಮ

ತಮ್ಮ ಕರ್ತವ್ಯದಲ್ಲಿ ನಿರತರಾಗಿರುವ ರೈತ ಬಳಗ ಮತ್ತು ಜೋಡಿ ಎತ್ತುಗಳು

ನಿರೀಕ್ಷಿಸಿ !!!

ರಾಷ್ಟ್ರವು ಸುವರ್ಣ ಸ್ವಾತಂತ್ರ್ಯೋತ್ಸವ ಆಚರಿಸುತ್ತಿರುವ ಸುಸಂದರ್ಭದಲ್ಲಿ ಸಂಗಾತಿಯು 1837ರ ಸ್ವಾತಂತ್ರ್ಯ ಸಂಗ್ರಾಮವನ್ನು ಓದುಗರಿಗೆ ಪರಿಚಯಿಸಲಿದೆ. ಈ ಲೇಖನವು ಪೂಜಾರಿ ಪೊಣ್ಣಪ್ಪನವರ ಹೊತ್ತಿಗೆಯಿಂದ ಮೂಡಿಬರಲಿದೆ. ನಿಮ್ಮ ಮುಂದಿನ ಪ್ರತಿಗಾಗಿ ಕಾದಿರಿಸಿ.

ನಿಧನ

ಗೌಡ ಸಂಸ್ಕೃತಿಯ ಉದ್ಧಾರಕ್ಕಾಗಿ ಅವಿಸ್ಮರಣೀಯ ಸೇವೆ ಸಲ್ಲಿಸಿರುವ ಕೋ. ಸ. ಕಾರ್ಯಪ್ಪನವರು. ಕೆಲವು ಕಾಲಗಳ ಅನಾರೋಗ್ಯದ ಬಳಿಕ ಜುಲೈ 21 ರಂದು ನಿಧನರಾದರು. ಇವರಿಗೆ 74 ವರ್ಷ ವಯಸ್ಸಾಗಿದ್ದು, ಪತ್ನಿ, ಒಬ್ಬ ಪುತ್ರ, ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ. ಭಾರತದ ಸೇನೆಯಲ್ಲಿ ಸೇವೆ ಸಲ್ಲಿಸಿ, ಕರ್ನಾಟಕ ಪೊಲೀಸ್ ಇಲಾಖೆಯಲ್ಲಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಗೌಡ ಇತಿಹಾಸಕ್ಕೆ ಸಂಬಂಧಪಟ್ಟ ಅಪೂರ್ವ ದಾಖಲೆಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದ ಇವರು ಪತ್ರಿಕೆಗಳಲ್ಲಿ, ಆಕಾಶವಾಣಿಯಲ್ಲಿ ನಮ್ಮ ಸಂಸ್ಕೃತಿಯನ್ನೂ ಪ್ರಚಾರ ಮಾಡಲು ಹೆಚ್ಚಿನ ಶ್ರಮ ವಹಿಸಿದ್ದರು.

ಓದುಗರ ಗಮನಕ್ಕೆ

ಪ್ರಿಯ ಓದುಗರೆ, ನೀವು ಕಳುಹಿಸುತ್ತಿರುವ ಲೇಖನಗಳು ಬಂದು ನಮ್ಮನ್ನು ಸುರಕ್ಷಿತವಾಗಿ ತಲುಪುತ್ತಿದೆ. ಆದರೆ, ನೀವು ಅಂಚೆ ಲಕೋಟೆಯ ಮೇಲೆ ಹಚ್ಚುವ ಸ್ಟಾಂಪ್‌ಗಳು ಸೂಕ್ತ ಮುಖ ಬೆಲೆಯನ್ನು ಹೊಂದಿರಲಿ. ಇಲ್ಲದಿದ್ದಲ್ಲಿ ಅಂತಹವುಗಳನ್ನು ತಿರಸ್ಕರಿಸಲಾಗುವುದು.

—ವ್ಯವಸ್ಥಾಪಕರು

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :

ಕಟ್ರತನ ಸಿ. ಜಯರಾಂ

ಸಹ ಸಂಪಾದಕ :

ಹುಲಿಮನೆ ರಮೇಶ್

ಪ್ರಸಾರ ವ್ಯವಸ್ಥಾಪಕ :

ಪಟ್ಟಡ ಎಲ್. ಶಿವಕುಮಾರ್

ಕಛೇರಿ ನಿರ್ವಹಣೆ :

ಪಟ್ಟಡ ಪಿ. ದೀಪಕ್

ಹೊಸೊಕ್ಲು ಹರಿಣಿ ಬೆಳ್ಯಪ್ಪ

ಮುಂಞ್ಞಾಪುರ ಧರಣಿ ಗಣಪತಿ

ಮುದ್ರಣ :

ಮುಂಞ್ಞಾಂಡ್ರ ಕೆ. ತಮ್ಮಯ್ಯ

ಆಶೀರ್ವಾದ್ ಪ್ರಿಂಟರ್ಸ್,

ವಿನಾಯಕನಗರ, ಮೈಸೂರು-12

ಗೌರವ ವ್ಯವಸ್ಥಾಪಕ :

ಪಟ್ಟಡ ಎಂ. ಪ್ರಭಾಕರ್

ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ

ನಂ. 322, ಭೋಗಾದಿ ಸರ್ಕಲ್,

ಹಿನಕಲ್ ಪೋಸ್ಟ್, ಮೈಸೂರು–17

ಒಳನೋಟ

	ಪುಟಗಳು
● ಸಂಪಾದಕೀಯ	2
● ಸಂದರ್ಶನ – ಶ್ರೀ ಪೂಜಾರಿ ಮೊಣ್ಣಪ್ಪ (ಉಳಿದ ಭಾಗ)	3
● ಗೋಡೆ ಉರುಳಿದ ನಾಡು – ನಾ ಕಂಡ ಜರ್ಮನಿ	5
● ಕಥೆ – ಜೀವದಾನ	7
● ಭರವಸೆಯ ಕ್ರೀಡಾಪಟು – ಕು॥ ಹುಲಿಮನೆ ಆರ್ ಮಂಜುಳ	9
● ಕೊಡಗಿನ ಗೌಡ ಸಿಂಹಗಳೆ ಎದ್ದೇಳಿ (ಉಳಿದ ಭಾಗ)	11
● ಹಾಂಗಾಂಗ್‌ನಲ್ಲಿ ಭಾರತೀಯನ ಬವಣೆ	12
● ಗೌಡರ ವಿವಾಹ ಪದ್ಧತಿ (ವೀಳ್ಯ ಶಾಸ್ತ್ರ ಕ್ರಮ)	13
● ಮರೆವು ಮತ್ತು ಜ್ಞಾಪಕ	15
● ನಿಮ್ಮ ಪತ್ರಗಳು	16

ಅರೆ ಭಾಷಿಕ ವಿಭಾಗ

● ಹಾಸ್ಯಲೇಖನ – ಹಾಕ್‌ಮಣೆ, ನೂಕ್‌ಮಣೆ, ತೋರ್‌ಮಣೆ!	17
● ,, – ಹೆಡ್ ಮಾಸ್ಟ್ರ ಅಲ್ಲಾ ! ಹೆಡ್ಡ ಮಾಸ್ಟ್ರ ?	18
● ,, - ಕುದ್ಕನ ಉಪಾಯಲಿ………	19
● ಕವನ - ಹಳ್ಯೊವು ನಾವೆಲ್ಲಾ	19
● ನಾಡ್‌ಮದ್ದ್ - ಮನೆ ಮದ್ದಾಗಿ "ನೀರುಳ್ಳಿ"	20

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ :–

ಹಾಡುಗಳು ಕಿವಿಯ ಮೇಲೆ ಬಿದ್ದಾಕ್ಷಣ ಒಮ್ಮೆ ಅತ್ತ ಗಮನ ಹರಿಸಿ ಅದು ಯಾವ ಹಾಡು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ಸಹಜ. ಮನುಷ್ಯ ನಿಗೆ ಹಾಡು, ಸಂಗೀತಗಳು, ಉಲ್ಲಾಸ—ಸಂತೋಷ ತರುವುದು ಮಾತ್ರವಲ್ಲ ಅದು ಒಂದು ಜನಾಂಗದ ಸಂಸ್ಕೃತಿ, ಆಗು – ಹೋಗುಗಳ ತಿಳಿಯಪಡಿಸುವುದೇ ಆಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸಂಗೀತದಿಂದ ಖಾಯಿಲೆಯನ್ನು ವಾಸಿಮಾಡಲು, ಜೀವವಿರುವಂತಹ ಪ್ರಾಣಿ, ಪಕ್ಷಿ, ಮರ, ಗಿಡ ಹೀಗೆ ಯಾವುದನ್ನು ತೆಗೆದುಕೊಂಡರೂ ಅವುಗಳ ಉತ್ತಮ ಬೆಳವಣಿಗೆಗೆ ಇದು ಪ್ರೇರಕವಾಗಬಲ್ಲದು ಎಂಬುದನ್ನು ಕಂಡುಹಿಡಿಯಲಾಗಿದೆ. ಇದನ್ನು ಏಕೆ ಇಲ್ಲಿ ಪ್ರಸ್ತಾಪಿಸಬೇಕಾಗಿದೆ ಎಂದರೆ ನಮ್ಮ ಸಂಸ್ಕೃತಿಯನ್ನು ಉಳಿಸಲು ಹಾಡುಗಾರಿಕೆಯು ಒಂದು ಪ್ರಮುಖ ಪಾತ್ರ ವಹಿಸಬಲ್ಲದು. ಅದು ಯುವ ಪೀಳಿಗೆಯನ್ನು ಬಡಿದೆಬ್ಬಿಸಬಹುದು, ಅವರ ಮನವೊಲಿಸಬಹುದು.

ಗೌಡ ಸಂಪ್ರದಾಯದ ಮದುವೆ ಸಮಾರಂಭಗಳಲ್ಲಿ ಹೇಳುವಂತಹ ಸೋಬಾನೆಗಳು ಅರ್ಥಪೂರ್ಣ, ಸತ್ವವನ್ನು ತುಂಬಿರುವಂತಹವು. ಕೆಲವು ಅಂಕಿತ ಪಕ್ಕಣೆಗಳಲ್ಲಿ ಹಾಡಿ ಜೀವನದ ಎಲ್ಲಾ ಹಂತಗಳನ್ನು ಕೆಲವೇ ಸಾಲುಗಳಲ್ಲಿ ಮುಗಿಸುವುದನ್ನು ನೋಡಿದರೆ ಅದರ ಅರ್ಥ ಬಹಳ ಮಹತ್ವವನ್ನು ಹೊಂದಿರುತ್ತದೆ. ಈ ಸೋಬಾನೆಗಳನ್ನು ಹಾಡುವಾಗ ಎಲ್ಲರ ಗಮನ ಇತ್ತ ಹರಿಯುವುದನ್ನು ನೋಡಿದರೆ ಅದಕ್ಕೆ ಎಷ್ಟು ವಲಿಸುವ ಶಕ್ತಿಯಿರಬಹುದು ಎಂಬುದನ್ನು ಗಮನಿಸಬೇಕಾಗುತ್ತದೆ. ಸೋಬಾನೆಗಳು ಇಂದು ನಮ್ಮ ಮದುವೆಗಳಲ್ಲಿ ಅತಿಯಾಗಿ ನಶಿಸಿ ಹೋಗುತ್ತಿರುವುದನ್ನು ಕಾಣಬಹುದು. ಮದುವೆ ಎಂದಾಕ್ಷಣ ಸಂಪ್ರದಾಯವನ್ನು ಬಿಟ್ಟು ಸಿರಿವಂತಿಕೆ ಎತ್ತಿಹಿಡಿಯುವಂತಾಗುತ್ತಿದೆ. ಮದುವೆಗಳಲ್ಲಿ ಸೋಬಾನೆಗಳು ಕೇವಲ ಒಂದು ಅಥವಾ ಎರಡು ಹಾಡುಗಳಿಗೆ ಸೀಮಿತವಾಗುತ್ತಿದೆ. ಹಾಡುವವರ ಕೊರತೆ ಎದ್ದು ಕಾಣುತ್ತಿದೆ. ಹೀಗಿರುವಾಗ ಸೋಬಾನೆಗಳನ್ನು ಧ್ವನಿ ಸುರುಳಿಯಲ್ಲಿ ಮುದ್ರಿಸಿ ಕ್ಯಾಸೆಟ್‌ಗಳ ರೂಪದಲ್ಲಿ ಹೊರತಂದಾಗ ಅದು ಸ್ಥಿರವಾಗಿ ಉಳಿದಿತ್ತು ಎಂಬ ಭಾವನೆ. ಇಂತಹ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಇಂದಿನ ಯುವ ಪೀಳಿಗೆಗೆ ಸಾಧ್ಯವಿದೆ. ○

ಎರೆಹುಳು – ನಿಮಗೆಷ್ಟು ಗೊತ್ತು ?

ಮಳೆಗಾಲ ಆರಂಭವಾಗುತ್ತಲೇ ಎಲ್ಲೆಲ್ಲೂ ಎರೆಹುಳುಗಳು ಕಾಣಬರುತ್ತವೆ. ನೋಟಕ್ಕೆ ಬಲು ಸಣ್ಣದಾಗಿರುವ ಈ ಹುಳು ಬಿಲದಲ್ಲಿ ವಾಸಿಸುತ್ತದೆ.

ಲಕ್ಷಾಂತರ ವರ್ಷಗಳ ಹಿಂದೆ ಇದು ಮೀನಿನಂತೆಯೇ ನೀರಿನಲ್ಲಿ ವಾಸಿಸುತ್ತಿತ್ತು. ಹಲ್ಲು ಇಲ್ಲವೇ ಕೊಂಬುಗಳಿಲ್ಲದ ಕಾರಣ ನೀರಿನ ಇತರ ಪ್ರಾಣಿಗಳು ಇದನ್ನು ತುಂಬಾ ಪೀಡಿಸುತ್ತಿದ್ದವು. ಹೀಗಾಗಿ ಮೆಲ್ಲಮೆಲ್ಲನೆ ಇದು ನೆಲಕ್ಕೆ ಬಂತು.

ಸೂರ್ಯನ ತೀವ್ರ ಬಿಸಿಲು, ತೆರೆದ ವಾತಾವರಣ ಹಾಗೂ ತೀಕ್ಷ್ಣ ಪ್ರಕಾಶದಲ್ಲಿ ಇದರ ಕೋಮಲ ಚರ್ಮ ಒಣಗತೊಡಗಿತು. ಈ ವಿಪತ್ತನ್ನು ತಾಳಲಾರದೆ ಎರೆಹುಳು ನೆಲದಲ್ಲಿ ಬಿಲ ತೋಡಿ ಇರಲಾರಂಭಿಸಿತು.

ಭಾರತ ಹಾಗೂ ಯುರೋಪಿನ ಕೆಲ ಎರೆಹುಳುಗಳು ಕೇವಲ ಒಂದಿಂಚು ಉದ್ದವಿದ್ದರೆ ಕೆಲವು ಹತ್ತು ಇಂಚು ಉದ್ದವಿರುತ್ತವೆ. ಅಮೇರಿಕ ಹಾಗೂ ಆಸ್ಟ್ರೇಲಿಯಾದ ಹುಳುಗಳು 8 ಅಡಿಯಿಂದ 12 ಅಡಿಯವರೆಗೆ ಉದ್ದವಿರುತ್ತವೆ.

ಸಾಮಾನ್ಯವಾಗಿ ಎರೆಹುಳುಗಳು ಕೆಂಪು ಹಾಗೂ ಕಂದು ಬಣ್ಣದವು. ಆದರೆ ಅಮೇರಿಕ ಹಾಗೂ ಯುರೋಪಿನ ಕೆಲ ಭಾಗಗಳಲ್ಲಿ ಕಡುನೀಲಿ ಬಣ್ಣದ ಎರೆಹುಳುಗಳೂ ಕಾಣ ಸಿಗುತ್ತವೆ. ಕೆಲವು ನೂಲಿನಷ್ಟು ಸೂಕ್ಷ್ಮವಾಗಿದ್ದರೆ, ಕೆಲವು ಹಾವಿನಷ್ಟು ದಪ್ಪವಿರುತ್ತವೆ. ಕೆಸರಿನ ಮೇಲ್ಪದರವನ್ನು ಒಂದಿಷ್ಟು ಕೆದರಿದೊಡನೆಯೇ ಕೆಲವೆಡೆ ಎರೆಹುಳುಗಳು ಕಾಣಬರುತ್ತವೆ. ಇವುಗಳಲ್ಲಿ ಹಲವಾರು ಜಾತಿಗಳಿವೆ. ವಿಜ್ಞಾನಿಗಳು ಸುಮಾರು 2,200 ಜಾತಿಗಳನ್ನು ಕಂಡುಹಿಡಿದಿದ್ದಾರೆ.

ಈ ಎರೆಹುಳುಗಳು ಮನುಷ್ಯನಿಗೆ ಉಪಯೋಗಿಯೇ. ಇವುಗಳ ಮಲ ಉತ್ತಮ ಗೊಬ್ಬರವಾಗಿದೆ. ಈ ರೀತಿ ಈ ಪುಟ್ಟ ಜೀವಿ ರೈತನಿಗೆ ಉಪಕಾರ ಮಾಡುತ್ತದೆ.

ಇದನ್ನು ಮೀನು ಹಿಡಿಯುವಾಗ ಗಾಳಕ್ಕೆ ಎರೆಹುಳು ಕಟ್ಟಿ ನೀರಿಗೆ ಬಿಡುತ್ತಾರೆ. ಮೀನುಗಳನ್ನು ಆಕರ್ಷಿಸಲು ಎರೆಹುಳು ಉತ್ತಮ ಸಾಧನ. ಎಲ್ಲೆಲ್ಲೂ ವಿಪುಲವಾಗಿ ಸಿಗುವ ಈ ಎರೆಹುಳು ಮೀನುಗಾರಿಕೆಗೆ ತುಂಬ ಉಪಯೋಗಿ. ○

ದುಡ್ಡು ಮಾಡುವುದು ಮುಖ್ಯವಲ್ಲ ! ಅದನ್ನು ಜನಹಿತಕ್ಕೆ ಬಳಸುವುದು ಮುಖ್ಯ

ಶ್ರೀ ಪೂಜಾರಿ ಅಚ್ಚಯ್ಯ ಮೊಣ್ಣಪ್ಪ, MA., DPMR., BEd., BL.

(ಕಳೆದ ಸಂಚಿಕೆಯಿಂದ)

ಸಂಗಾತಿ : ಈ ಸಮಾಜ ಸ್ಥಾಪನೆಗೆ ನಿಮಗೆ ಬಂಡವಾಳ ಎಲ್ಲಿಂದ ಬಂತು ?

ಉತ್ತರ : ನಮ್ಮ ಸಮಾಜದ ಸ್ಥಾಪನೆಗೆ ನಾವು ಮನೆ ಮನೆಗೆ ಹೋಗಿ ಸಂಗ್ರಹಿಸಿದ್ದು ಮತ್ತು ನಾನು ಸಮಾಜಕ್ಕಾಗಿ ಒಂದು ಹೊತ್ತಿಗೆ ಹೊರತಂದು ಅದರಿಂದ ಬಂದ ಹಣ, ಹಾಗೆ ಮಧ್ಯಮ ವರ್ಗದ ಕಾರ್ಖಾನೆ ನೌಕರರು ಸಹಕರಿಸಿದ್ದು ಮುಖ್ಯವಾಗಿದೆ.

ಸಂಗಾತಿ : ನಿಮ್ಮ ಸಂಘದಲ್ಲಿ ಇನ್ನಿತರ ಚಟುವಟಿಕೆ ಏನು ?

ಉ : ಹಲವು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯವಾಗಿ ಮಹಿಳಾ ಸಮಾಜ ಸ್ಥಾಪನೆ ಮಾಡಿದ್ದು. ಈ ಸಮಾಜದಲ್ಲಿ ಮಹಿಳೆಯರಿಗೆ ಟೈಲರಿಂಗ್, ಕಂಪ್ಯೂಟರ್, ಟೈಪಿಂಗ್‌ಗಾಗಿ ಪ್ರೋತ್ಸಾಹ ನೀಡಲಾಗುತ್ತಿದೆ. ಇನ್ನು ಉತ್ತಮ ಮಟ್ಟದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯುವ ಪೀಳಿಗೆಗೆ ಅವಕಾಶ ಕೊಡುವ ಮನಸ್ಸಿದೆ.

ಸಂದರ್ಶನ, ಲೇಖನ :
ಕಟ್ರತನ ಜಯರಾಂ

ಸಂಗಾತಿ : ಸಮಾಜದಲ್ಲಿ ನಮ್ಮ ಯುವ ಜನಾಂಗಕ್ಕೆ ಸಹಾಯವಾಗುವಂತಹದೇನಾದರೂ ಇದೆಯೇ ?

ಉ ; ಹೌದು ಖಂಡಿತ ಇದೆ. ನಮ್ಮ ಬಡ ಮಕ್ಕಳಿಗೆ ನಾವು ಕೊಡುವ ತರಬೇತಿಯಿಂದ ಸಣ್ಣ ಕೈಗಾರಿಕೆ, ಗುಡಿ ಕೈಗಾರಿಕೆ ಸ್ಥಾಪಿಸಿದಾಗ ಅದರಿಂದ ಹಣದ ಸ್ಥಿತಿ ಉತ್ತಮವಾಗುವಂತೆ ಮುಂದಿನ ಪೀಳಿಗೆಗೆ ಸಹಾಯಕವಾಗುವಂತೆ ಮತ್ತು ಈಗಿನ ಯುವ ಪೀಳಿಗೆಗೆ ಮಾರ್ಗಸೂಚಿ ಅಂದರೆ ಕೆಲವು ಪರೀಕ್ಷಾರ್ಥಿಗಳಿಗೆ ಮಾಹಿತಿ ಒದಗಿಸುವುದು. ಉದಾಹರಣೆಗೆ IAS, KAS, ಮತ್ತು IPS ನಂತಹ ಪರೀಕ್ಷೆ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯವನ್ನು ಮಾಡುತ್ತಿದ್ದೇವೆ. ಮತ್ತು ನಮ್ಮ ಸಮಾಜದ ವತಿಯಿಂದ ನಿವೇಶನಗಳನ್ನು ಒದಗಿಸಲಾಗಿದೆ. ಅದಕ್ಕಾಗಿ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಇದೆ.



ಪೂಜಾರಿ ಮೊಣ್ಣಪ್ಪನವರು, ವಕೀಲರು

ಸಂಗಾತಿ : ಬೆಂಗಳೂರು, ಮೈಸೂರು, ಕೊಡಗು ಹೀಗೆ ಹಲವೆಡೆ ನಮ್ಮ ಸಮಾಜಗಳಿವೆ. ಇವನ್ನೆಲ್ಲಾ ಒಂದು ಗೂಡಿಸುವುದರಿಂದ ನಮ್ಮ ಸಮಾಜ ಬೆಳೆಯಲು ಸಹಾಯಕವಾಗಬಹುದಲ್ಲವೆ ?

ಉ : ಖಂಡಿತ ನಾನು ಈ ವಿಷಯವನ್ನು 1970ರಲ್ಲಿ ಪ್ರಸ್ತಾಪಿಸಿದೆ. ಹೌದು ಸಮಾಜ ಎಲ್ಲೆಡೆಯಿದೆ. ಇದು ನಾಲ್ಕು ಗೋಡೆಗಳ ಮಧ್ಯ ಇರುವುದಲ್ಲ. ಒಳಗಿರುವವರನ್ನು ಹೊರಕ್ಕೆ ತರುವುದು ಮುಖ್ಯ. ಸಮಾಜ ಎಂದಾಗ ವಾರಕ್ಕೊಂದು ಸಭೆ ಕರೆಯುವುದು ಮಾತ್ರವಲ್ಲಾ ಸಭೆ ಕರೆದು ಚರ್ಚಿಸಿದ ವಿಷಯವನ್ನು ಕಾರ್ಯರೂಪಕ್ಕೆ ತರುವುದು ಮುಖ್ಯ. ಎಲ್ಲಾ ಸಮಾಜವನ್ನೂ ಒಗ್ಗೂಡಿಸಿದರೆ ಅದರಿಂದ ಸಾಕಷ್ಟು ಕೆಲಸ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಬಹುದು ಎಂಬುವುದು ಸತ್ಯ. ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗೊಲ್ಲವೆಂದರೆ ಅದು ಕಷ್ಟವಾದೀತು.

ಸಂಗಾತಿ : ಸಮಾಜಗಳಲ್ಲಿ ಮಹಿಳೆಯರ ಪಾತ್ರ ಸ್ವಲ್ಪ ಕಮ್ಮಿ ಇದೆ ಎನ್ನಿಸಿದೆ ಅದಕ್ಕಾಗಿ ನೀವೇನು ಹೇಳುತ್ತೀರ ?

ಉ : ಮುಖ್ಯವಾಗಿ ಮಹಿಳೆಯರು ಮುಂದೆ ಬರಬೇಕು. ಈಗ ನೋಡಿ ನಮ್ಮ ಸಮಾಜದಲ್ಲಿ ಮಹಿಳಾ ಸಮಾಜ ಸ್ಥಾಪನೆಗೆ ನಾವು ಒತ್ತಿ ಒತ್ತಿ ಹೇಳಬೇಕಾಯಿತು. ಹಾಗಾಗಬಾರದು. ಮಹಿಳೆಯರು ಸ್ವತಃ ಮುಂದೆ ಬಂದರೆ ಅದು ಸಾಧ್ಯ. ಸರಕಾರದಿಂದ ಧನ ಸಹಾಯವಿದೆ, ಮಾರ್ಗದರ್ಶನವಿದೆ,ಅದನ್ನೆಲ್ಲಾ ಉಪಯೋಗಿಸಿಕೊಂಡಾಗ ಒಂದು ಬಲಿಷ್ಠ ಸಮಾಜ ಸ್ಥಾಪನೆಗೆ ಸಾಧ್ಯ. ಒಂದು ಗಾಡಿಗೆ ಎರಡು ಚಕ್ರ ಹೇಗೆ ಮುಖ್ಯವೊ ಹಾಗೆ ಮಹಿಳೆ ಪುರುಷರ ಸಮಕ್ಕೆ ಹೆಗಲು ಕೊಟ್ಟು ಸಮಾಜವು ಸುಲಲಿತವಾಗಿ ಸಾಗಲು ಸಾಧ್ಯ. ಅತ್ತವರಿಗೆ ಮಾತ್ರ ಹಾಲು ಕೊಡುವಂತೆ ನಾವು ಬೇಡಿದಾಗ ನಮಗೆ ಏನು ಬೇಕೊ ಅದು ದೊರಕುತ್ತದೆ. ತೊಟ್ಟಿಲು ತೂಗಿದ ಕೈಯೇ ಸಾಮ್ರಾಜ್ಯವಾಳುವ ಕೈ. ಹಾಗೆ ನಮ್ಮ ಮಹಿಳೆಯು ಮುಂದುವರೆಯುವುದು ಮುಖ್ಯ. ಪ್ರತಿಯೊಂದು ಸಮಾಜದಲ್ಲಿ ಮಹಿಳೆಯು ಅತೀ ಮುಖ್ಯ ಪಾತ್ರ ವಹಿಸುತ್ತಾಳೆ. ಇಷ್ಟೆ ನಾನು ಹೇಳುವುದು.

ಸಂಗಾತಿ : ನಮ್ಮ ಮಡಿಕೇರಿಯಲ್ಲಿ ತುಂಬ ದೊಡ್ಡ ಸಮಾಜವಿದೆ. ಆದರೆ ಅಲ್ಲಿ ಕಾರ್ಯ ಸಾಧನೆಗಳು ತುಂಬಾ ಕುಂಠಿತದಲ್ಲಿದೆ ಇದಕ್ಕೇನು ಹೇಳುತ್ತಿರಾ ?

ಉ : ದುಡ್ಡಿಲ್ಲವಾದರೆ ಕಾರ್ಯ ಪ್ರವೃತ್ತಿಗೆ ಕಷ್ಟವಾಗಬಹುದು. ಅಷ್ಟೇ ಅಲ್ಲಾ ಒಂದು ಸಮಾಜ ಸಭೆ ಕರೆಯುವುದು ಅದರಲ್ಲಿ ಚರ್ಚಿಸಿದ ವಿಷಯವನ್ನು ಕಾರ್ಯರೂಪಕ್ಕೆ ತರುವುದು ಅತಿಮುಖ್ಯ. ಮಡಿಕೇರಿಯಲ್ಲಿ ಜನರಿದ್ದಾರೆ, ಬಲವಿದೆ. ಅಲ್ಲೊಂದು ಮಹಿಳಾ ಸಮಾಜ ಸ್ಥಾಪಿಸುವುದು. ಹೀಗೆ ಜನಗಳಿಗೆ ತಿಳಿವಳಿಕೆ ನೀಡುವಂತಹ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳುವುದು ಮುಖ್ಯ.

ಸಂಗಾತಿ : ನೀವು ಬೆಂಗಳೂರನ್ನು ಬಿಟ್ಟು ಕೊಡಗಲ್ಲಿ ನೆಲೆಸಲು ಪ್ರಯತ್ನಿಸುತ್ತಿದ್ದಿರಿ ಎಂದು ತಿಳಿಯಿತು ಇದಕ್ಕೇನು ಹೇಳುತ್ತೀರ ?

ಉ : ಹೌದು ನಾನು ಸಮಾಜ ಸೇವೆಯಲ್ಲಿ 30 ವರ್ಷ ಕಳೆದಿದ್ದೇನೆ. ನನ್ನ ಉತ್ತರಾಧಿಕಾರಿಯಾಗಿ ಶ್ರೀ ದಿನಕರ ಗೌಡರಿದ್ದಾರೆ ಇನ್ನು ಹಲವು ಜವಾಬ್ದಾರಿಯುತರಿದ್ದಾರೆ. ನನಗೆ ನನ್ನ ತಾಯಿ ನಾಡಿನಲ್ಲಿ ನೆಲೆಸಬೇಕು ಎಂಬ ಆಸೆಯಿದೆ. ಸಮಾಜ ಹುಟ್ಟುಹಾಕಿ ಇಂದು ನಡೆಸಿಕೊಂಡು ಹೋಗುವುದು ಬಾಕಿಯಿದೆ. ನನಗೆ ಇಂದು ತುಂಬಾ ಸಂತೋಷವಾಗಿದೆ.

ಸಂಗಾತಿ : ಟಿ. ವಿ. ಗಳಲ್ಲಿ ರೇಡಿಯೊಗಳಲ್ಲಿ, ದಸರಗಳಲ್ಲಿ ನಮ್ಮ ಅರೆ ಬಾಷಾ ಜನಾಂಗಕ್ಕೆ ಸಂಬಂಧಪಟ್ಟ ಸಾಂಸ್ಕೃತಿಕ ಚಟುವಟಿಕೆ ಕಾರ್ಯಕ್ರಮಗಳು ಕಂಡು ಬರುತ್ತಿಲ್ಲ ಇದಕ್ಕೆ ನೀವೇನು ಹೇಳುತ್ತೀರಾ?

ಉ : ಹೌದು ಇದಕ್ಕಾಗಿ ಕ್ಯಾಸೆಟ್‌ಗಳನ್ನು ಮಾಡುವುದು, ಹಬ್ಬ ಹರಿದಿನಗಳಲ್ಲಿ ಇವುಗಳನ್ನು ಹಾಡಿಸುವುದು, ಸಿನಿಮಾ ಮಾಡುವುದು, ಹಾಡುಗಳಿಗೆ ತಕ್ಕಂತೆ ಬಳಸಿಕೊಳ್ಳುವುದು ಮುಖ್ಯ ಇದಕ್ಕೆ ಯುವಕರು ಮುಂದೆ ಬರಬೇಕು. ಆಗ ಇದು ರಾಷ್ಟ್ರ ಮಟ್ಟಕ್ಕೆ ಹಬ್ಬುವುದರಲ್ಲಿ ಸಂಶಯವಿಲ್ಲ.

ಸಂಗಾತಿ : ನಮ್ಮಲ್ಲಿ ಅರೆಭಾಷೆ ಮಾತನಾಡುವವರು ಎಲ್ಲಾ ಒಂದು ಎಂಬ ನಿಮ್ಮ ಭಾವನೆ, ನಮ್ಮ ಸಮಾಜದಲ್ಲಿ ದಕ್ಷಿಣ ಕನ್ನಡದವರು ಮತ್ತು ಕೊಡಗಿನವರು ಇದ್ದಾರೆ ಇವರಲ್ಲಿ ಭಿನ್ನಾಭಿಪ್ರಾಯ ಏನಾದರೂ ತಲೆದೋರಿದೆಯೇ ?

ಉ : ಖಂಡಿತ ಆ ಭಾವನೆ ಇಲ್ಲವೇ ಇಲ್ಲಾ ! ನಾವೆಲ್ಲಾ ಒಂದೇ.

ಸಂಗಾತಿ : ಯುವ ಪೀಳಿಗೆಗೆ ನೀವೇನು ಹೇಳುತ್ತೀರಿ ?

ಉ : ಈಗ ನೋಡಿ ನಿಮ್ಮನ್ನೇ ತೆಗೆದುಕೊಳ್ಳಿ ನೀವು "ಕೊಡಗು ಸಂಗಾತಿ" ಯನ್ನು ಹೊರ ತಂದು ಸಮಾಜ ಸೇವೆಯಲ್ಲಿ ತೊಡಗಿದ್ದೀರಿ ನಿಮ್ಮಗಳ ಹಾಗೆ ಎಲ್ಲಾ ಯುವಕರು ಮುಂದೆ ಬರಬೇಕು.

ಸಂಗಾತಿ : ನಾವು 'ಕೊಡಗು ಸಂಗಾತಿ' ಯನ್ನು ಅರೆಭಾಷಿಕ ಜನಾಂಗಕ್ಕಾಗಿ ಹುಟ್ಟು ಹಾಕಿದ್ದೇವೆ. ಇದಕ್ಕಾಗಿ ಸಂಘ ಸಂಸ್ಥೆ ಮತ್ತು ಸಮಾಜಗಳುಬೆನ್ನೆಲುಬಾಗಿ ನಿಂತರೆ ನಮಗೆ ಸಹಾಯವಾಗಬಹುದಲ್ಲಾ ಇದಕ್ಕೆ ನೀವೇನು ಹೇಳುತ್ತೀರ ?

ಉ : ಹೌದು ಇದು ಸಾಧ್ಯವಿದೆ. ಇದಕ್ಕೆ ಸಂಘ ಸಂಸ್ಥೆಗಳು ಮುಂದೆ ಬರಬೇಕು.

ದಕ್ಷಿಣ ಕನ್ನಡ ಮತ್ತು ಕೊಡಗು ಗೌಡ ಸಮಾಜದ ಉಪಾಧ್ಯಕ್ಷರಾಗಿ ಅನಂತರಾಜುಗೌಡ ಮತ್ತು ಕಾರ್ಯದರ್ಶಿ ದಿನಕರಗೌಡ, ಟ್ರಜರಿ ಮೊಟ್ಟೆರ ಕುಶಾಲಪ್ಪ ಹೀಗೆ ಇಂದು ಈ ಸಮಾಜ ಉತ್ತಮ ಮಟ್ಟದಲ್ಲಿದೆ. ಇದರ ಹಾಲಿ ಅಧ್ಯಕ್ಷರಾದ ಶ್ರೀ ಪೂಜಾರಿ ಮೊಣ್ಣಪ್ಪನವರು ಕೆಲವು ಹೊತ್ತಿಗೆಗಳನ್ನೂ ಹೊರ ತಂದಿದ್ದಾರೆ. 1984 ರಲ್ಲಿ ಹೊರತಂದ "1837ರ ಸ್ವಾತಂತ್ರ್ಯ ಸಂಗ್ರಾಮ" ಹೀಗೆ ಸಾಹಿತಿಗಳಾಗಿ, ಸಮಾಜ ಸುಧಾರಕರಾಗಿ ಇಂದು ತಮ್ಮ ಇಳಿವಯಸ್ಸಿನಲ್ಲಿ ಅತ್ಯಂತ ಚಟುವಟಿಕೆಯ ವ್ಯಕ್ತಿಯಾಗಿ ಕಂಗೊಳಿಸುತ್ತಿದ್ದಾರೆ. ಇಂದು ಇವರು ಸುಮಾರು 68 ವರ್ಷದ ಯುವಕರು. ರಾಷ್ಟ್ರದ ಸ್ವಾತಂತ್ರ್ಯ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಸ್ವಾತಂತ್ರ್ಯ ಯೋಧ. ಇವರ ಮನೆಯೊಡತಿ ಎಂ. ಎ. ಪದವಿದರೆ, ರೀಜನಲ್ ಡೈರೆಕ್ಟರ್ ಆಫ್ ಸಂಟ್ರಲ್ ವರ್ಕರ್ಸ್ ಎಜುಕೇಷನ್‌ನಲ್ಲಿ ಸೇವೆ ಸಲ್ಲಿಸಿ ಈಗ ನಿವೃತ್ತಿ ಹೊಂದಿದ್ದಾರೆ. ಇವರಿಗೆ ಮೂರು ಜನ ಮಕ್ಕಳು. ಇಬ್ಬರು ಹೆಣ್ಣು ಒಬ್ಬ ಗಂಡು. ಹೀಗೆ ತುಂಬು ಸಂಸಾರ. ಸಮಾಜ ಸೇವೆಯ ಚಕ್ರದಲ್ಲಿ ಉರುಳುತ್ತಿರುವ ಈ ಮಹಾನ್ ವ್ಯಕ್ತಿಗೆ ನಮ್ಮ ಜನಾಂಗದ ಪರವಾಗಿ ಅನಂತ ವಂದನೆಗಳು. ಆದರೆ ಇಷ್ಟೊಂದು ದುಡಿಸಿಕೊಂಡ ಸಮಾಜ ವೈಯಕ್ತಿಕವಾಗಿ ಅವರಿಗೆ ಏನನ್ನೂ ಮಾಡದಿದ್ದುದನ್ನು ಸಂಗಾತಿ ಕಂಡಿತ್ತು. ದೇವರು ಇವರಿಗೆ ಇನ್ನೂ ಹೆಚ್ಚಿನ ಬಲಕೊಟ್ಟು ಸಮಾಜ ಸೇವೆಯಲ್ಲಿ ಅವರನ್ನು ಕಾಣುವ ಎಂಬ ಹಾರೈಕೆಯೊಂದಿಗೆ ನಾವು ಹಿಂತಿರುಗಿದೆವು.

ಗೋಡೆ ಉರುಳಿದ ನಾಡು - ನಾ ಕಂಡ ಜರ್ಮನಿ

(ಕಳೆದ ಸಂಚಿಕೆಯಿಂದ)

ಮನುಷ್ಯ ಎಷ್ಟೊಂದು ಪ್ರಮಾಣದಲ್ಲಿ ಕ್ರೂರಿಯಾಗಲು ಸಾಧ್ಯ ಎಂಬುದು ಕಂಡು ಮೂಕಸ್ಮಿತರಾದೆವು. ಇಷ್ಟಾಗಿಯೂ ಕಾನ್ಸಂಟ್ರೇಶನ್ ಕ್ಯಾಂಪಿನ ನೆಲಮಾಳಿಗೆಗೆ ಪ್ರವೇಶದ ಅನುಮತಿಯನ್ನು ಯಾವುದೇ ವೀಕ್ಷಕರಿಗೂ ಈಗ ನೀಡಲಾಗುತ್ತಿಲ್ಲ. ಸಂಪೂರ್ಣ ಜರ್ಮನ್ ಪ್ರವಾಸದಲ್ಲಿ ಈ ಕಾನ್ಸೆಂಟ್ರೇಸನ್ ಕ್ಯಾಂಪ್ ನಮಗೊಂದು ಮರೆಯಲಾಗದ ಅನುಭವವಾಗಿ ಉಳಿಯಿತು.

1961ರಲ್ಲಿ ಜರ್ಮನಿ ಇಬ್ಭಾಗಗೊಂಡು ಒಂದೇ ಜನಾಂಗದ ಮಧ್ಯೆ ಎದ್ದ ಗೋಡೆ ಕಾರ್ಯದ ಸಂಕೇತವಾಗಿ ಮೂರು ದಶಕಗಳ ಕಾಲ ಉಳಿದೇ ಬಿಟ್ಟಿತು. ಈಗ ಆ ಗೋಡೆ ಪೂರ್ವ ಪಶ್ಚಿಮದ ಮಧ್ಯದ ಕಂದರ ಇತಿಹಾಸವಾಗಿರುವುದು ಐತಿಹಾಸಿಕ ವಿಷಯ.

ಬರ್ಲಿನ್ ನಗರದ ಜುಲೈ ತಿಂಗಳ ನಾಡಹಬ್ಬವಂತೂ ತುಂಬಾ ಆಸಕ್ತಿದಾಯಕ. ಬರ್ಲಿನ್ ನಗರದ ರಸ್ತೆಗಳಲ್ಲಿ ತಾಳ ಹಾಕಿ ಕುಣಿಯುತ್ತಾ ಒಂದು ದಿವಸವನ್ನು ಸಂಭ್ರಮ ಉಲ್ಲಾಸದಿಂದ ಪ್ರೇಮಿಗಳು ಕಳೆಯುತ್ತಾರೆ. 'ಲವ್ ಪ್ಯಾರೆಡ್' ಅಥವಾ 'ಪ್ರೇಮ ಮೆರವಣಿಗೆ' ಯೆಂದು ಕರೆಯಲ್ಪಡುವ ಪ್ರೇಮದ ಈ ಆಚರಣೆಯ ಮೂಲಕ ಹಿಟ್ಲರ್‌ನ ಕಾರ್ಯದ ದಿನಗಳನ್ನು ಜನತೆ ಮರೆಯಲು ಈ ರೀತಿಯಾಗಿ ಪ್ರಯತ್ನಿಸುತ್ತಾರೆ. ಅಪರಾಹ್ನ ಸಮಯ ಸುಮಾರು ಮೂರಕ್ಕೆ ಪ್ರಾರಂಭವಾಗುವ ಕುಣಿತ ಸಂಭ್ರಮಗಳು ಮಧ್ಯರಾತ್ರಿಯ ತನಕ ಸಾಗಿ ಸಂಪೂರ್ಣ ರಸ್ತೆಯೇ ಉಯ್ಯಾಲೆಯಾಡುತ್ತಿದೆಯೆ ? ಎಂಬ ಸಂದೇಹವನ್ನು ನೋಡುವವರಿಗೆ ಮೂಡಿಸುತ್ತದೆ. ರಾತ್ರಿಯ ವೇಳೆ, ಇದರಿಂದಾಗಿ ಬಿಯರ್ ಬಾಟಲ್‌ಗಳು ತುಂಬಿದ್ದರೂ ಬೆಳಿಗ್ಗೆ ಪುನಃ ನೋಡಿದರೆ ಸಂಪೂರ್ಣ ಸ್ವಚ್ಛವಾದಂಥ ರಸ್ತೆಗಳನ್ನು ಕಾಣಬಹುದಾಗಿತ್ತು. ಯಾವುದೇ ಕಾರ್ಯಕ್ರಮಗಳು ನಡೆದರೂ ಸ್ವಚ್ಛ ಹಾಗೂ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಪ್ರತಿಯೊಂದರಲ್ಲು ಎದ್ದು ಕಾಣುವ ಪರಿಸರ ನೈರ್ಮಲ್ಯ ಪ್ರಜ್ಞೆ ನಮ್ಮ ಮಟ್ಟಿಗಂತೂ ಅತ್ಯದ್ಭುತ.

ಉತ್ತರದ ದೇಶವಾಗಿರುವ ಕಾರಣ ರಾತ್ರಿಯನ್ನಂತು ನಾವಿಲ್ಲಿ ಕಾಣುವುದೇ ಕಡಿಮೆ. ಆದ್ದರಿಂದ ಬೆಳಿಗ್ಗೆ ನಾಲ್ಕರತನಕ ಮಾತ್ರ ಸೂರ್ಯ ಅಸ್ತಮಿಸಿರುತ್ತಾನೆ. ಚಂದ್ರನಂತೂ ಕೇವಲ ಐದೇ ಗಂಟೆಗಳ ಕಾಲ ಗೋಚರಿಸುತ್ತಾನೆ.

ಜರ್ಮನ್‌ರ ಮನಸ್ಸು ಒಂದು ರೀತಿಯಲ್ಲಿ ಮುಗ್ಧವಾದ ಕೋಮಲವಾದ ಮನಸ್ಸೆನ್ನಬಹುದು. ವರ್ಷದ ಆರು ತಿಂಗಳು ಮಂಜು ಅಥವಾ ಮಳೆ ಬಿದ್ದು ನೆಲ ಯಾವಾಗಲೂ ಮೃದುವಾಗಿಯೆ ಇರುತ್ತದೆ. ಅಂತಹ ಕಾಲದಲ್ಲಿ ಸ್ವಭಾವಿಕವಾಗಿ ಬೆಳೆದ ಹೂಗಳನ್ನು ಕಾಣುವುದು ಅಸಾಧ್ಯವಾದರೂ ಹೂವಿನ ಕುಂಬಗಳಂತೂ ಪ್ರತಿ ಮನೆಯಲ್ಲಿಯೂ ಕಾಣಬಹುದು. ಜರ್ಮನರ ಹೂವಿನ ಬಗೆಗಿನ ವ್ಯಾಮೋಹ ಎಷ್ಟೆಂದರೆ ಎಲ್ಲೆಲ್ಲೂ ಪುಷ್ಪದ ಅಂಗಡಿಗಳನ್ನು ಕಾಣಬಹುದು. ಎಷ್ಟೇ ಪ್ರಮುಖವಾದ ಅವರ ಗೀಳೆಂದರೆ ಸಾಕುನಾಯಿ ಹಾಗೂ ತರತರದ ಗೊಂಬೆಗಳು.

ದಿಗಂತದಲ್ಲಿನ ಪರ್ವತಗಳ ಸಾಲು ಅದರ ತಪ್ಪಲಲ್ಲಿ ದಟ್ಟ ಕಾಡುಗಳು, ಪಕ್ಕದಲ್ಲೆ ಹರಿಯುವ ನೀರಿನ ಝರಿಗಳು, ದೃಷ್ಟಿಯುದ್ದಕ್ಕೂ ಕಾಣುವ ಧಾನ್ಯದ ಕಣಜಗಳು ಅದಕ್ಕಿಂತಲೂ ಪ್ರಕೃತಿಯೊಂದಿಗೆ ಸಂಪೂರ್ಣವಾಗಿ ವಿಲನವಾಗುತ್ತಿರುವ ರಚನಾ ಶೈಲಿಯಿಂದ ಕಂಗೊಳಿಸುವ ಆಧುನಿಕ ಕಟ್ಟಡಗಳು ನಾಗರಿಕತೆಗೆ ಬಲಿಯಾಗದೆ ಇನ್ನು ಉಳಿದುಕೊಂಡಿರುವ ಪ್ರಾಚೀನ ಚರ್ಚುಗಳು ಹಾಗೂ ಕಟ್ಟಡಗಳು ಜರ್ಮನರ ಸೌಂದರ್ಯ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತವೆ. ಉದಾಹರಣೆಗೆ ಸ್ಟುಟ್‌ಗಟ್ ಎಂಬ ಊರು ಬೆಟ್ಟದ ತಪ್ಪಲಲ್ಲಿ ಉದ್ದಕ್ಕೂ ವ್ಯಾಪಿಸಿದ್ದು ಊರಿನ ಅರ್ಧ ಭಾಗವನ್ನು ಉದ್ಯಾನವೇ ಆಕ್ರಮಿಸಿದೆ. ಇಲ್ಲಿನ ರೈಲ್ವೆ ನಿಲ್ದಾಣದಲ್ಲಿ ನಮ್ಮ ನಾಟಕದ ಪ್ರದರ್ಶನ ಏರ್ಪಟ್ಟಾಗಿದ್ದ ಅನುಭವ ವೈಶಿಷ್ಟ್ಯಪೂರ್ಣವಾಗಿತ್ತು.

ಅಲ್ಲಿನ ಬ್ರೆಡ್ ಮತ್ತು ಕೇಕಿನ ಆಹಾರ ಪದ್ಧತಿಗೆ ಹೊಂದಿಕೊಳ್ಳಲು ಚಡಪಡಿಸಿ ಭಾರತೀಯ ಊಟ ಸಿಗುವ ಸ್ಥಳಗಳ ಬಗ್ಗೆ ವಿಚಾರಿಸುತ್ತಿದ್ದೆವು. ಪ್ರಯಾಸದಿಂದ ಅವರು ತಿಳಿಸಿದ ದಿಕ್ಕಲ್ಲಿ ಚಲಿಸಿದರೆ ಅರ್ಧ ಗಂಟೆಯಷ್ಟು ಕಾಲ ಹೋಟೆಲು ಹುಡುಕಾಟಕ್ಕೆ ವ್ಯಾಯವಾಗುತ್ತಿತ್ತು. ಹೋಟಲೇನೊ ಸಿಕ್ಕಿತು ಎಂದಾಗ ಅನ್ನದ ಬೆಲೆಯಂತೂ ತಿಳಿದು ಗಂಟಲಲ್ಲೆ ಕಲ್ಲು ಸಿಕ್ಕಿ ಹಾಕಿಕೊಂಡಂತಾಗುತ್ತಿತ್ತು. ಕೇವಲ 100 ಗ್ರಾಂ ಅನ್ನಕ್ಕೆ 5 ಡಟ್ ಮಾರ್ಕುಗಳನ್ನು (ಸುಮಾರು 100 ರೂಪಾಯಿ) ಕೊಡಬೇಕು. ಆದರೆ ಆ ನೂರು ಗ್ರಾಂ ಅನ್ನ ನಮ್ಮ ಮೂರು ತುತ್ತಿಗೂ ಬರಲಾರದು. ನೀರಿಗಿಂತ ಬಿಯರೆ ಅಗ್ಗವಾಗಿದ್ದರೂ ನೀರಂತೂ ಬೇಕೆ ಬೇಕಲ್ಲ ! ಅಗ್ಗದ ಬಿಯರಿಗಾಗಿ ಸಂತಸಪಟ್ಟಿದ್ದರೂ ನೀರು ಕುಡಿಯಲು ಚಟಪಡಿಸಬೇಕಾಯಿತು. ಜನರು ಸ್ತ್ರೀಯರನ್ನು ವಿಶೇಷವಾಗಿ ಗೌರ

ವಿಸುತ್ತಾರೆ. ಹೆಚ್ಚುಕಡಿಮೆ ಊನಜನರು ಕಟ್ಟುನಿಟ್ಟಾಗಿ ಸಂಪ್ರದಾಯಗಳನ್ನು ಪಾಲಿಸುತ್ತಾರೆ. ಗಂಡು ಹೆಣ್ಣಿನ ಎದೆ ಬದಿಯಲ್ಲಿ ನಡೆಯುವುದು ವಾಡಿಕೆ. ಅಷ್ಟು ದೊಡ್ಡ ಪ್ರೇಮಿಗಳ ಮೇಳದಲ್ಲಿ ಕೂಡ ಹೆಣ್ಣಿಗೆ ಅಪಮಾನವಾಗುವಂಥದ್ದು ಏನೂ ನಡೆಯಲಿಲ್ಲ.

ಕಲಾವಿದರ ಪಾಲಿಗಂತೂ ಜರ್ಮನಿ ಯೊಂದು ಯಾತ್ರಾ ಸ್ಥಳದಂತೆ ಕಲಾ ಪ್ರದರ್ಶನದ ಸಮಯದಲ್ಲಿ ಭಾಷೆ ನಮ ಗೆಂದೂ ಸಮಸ್ಯೆಯಾಗಲಿಲ್ಲ. ಜನರ ರೀತಿ ನೀತಿ ಪ್ರಕೃತಿ ಸೌಂದರ್ಯ ಅವಲೋಕಿಸಿದಾಗ ನಾನೆಷ್ಟು ಕಲಿಯಲು ಬಾಕಿ ಇದೆ ಎಂಬ ಪ್ರಜ್ಞೆ ನಿಧಾನವಾಗಿ ಮೂಡಿಬಂತು.

ನಾಟಕ ಪ್ರವಾಸಕಥನವೆಂದು ಪ್ರಾರಂಭಿಸಿದ ನಾನು ನಾಟಕೀಯವಾಗಿ ನಾಟಕೇತರ ಅಂಶಗಳನ್ನು ಹೇಳುತ್ತಿದ್ದೆ ನೆಂದು ಕಂಡರೂ ನಾಟಕದ ಅನುಭವದಷ್ಟೇ ಇತರ ಅನುಭವಗಳು ರೋಚಕಾರಿ ಯಾಗಿದ್ದವು ಎಂಬುದು ವಾಸ್ತವ. ಇನ್ನು ನಮ್ಮನ್ನೆಲ್ಲ ಆಮಂತ್ರಿಸಿದ ಗಯಟೆ ನಾಟಕ ಸಂಸ್ಥೆಯ ನಿರ್ದೇಶಕಿ ಗೋಲ್ಡ್ ಮೆಸ್ ಸರಳ, ಸೂಕ್ಷ್ಮ ಹೆಂಗಸು, ಅವರ ಬಗೆಗಿನ ಎಲ್ಲಾ ಕಲ್ಪನೆಗಳನ್ನು ತಮ್ಮ ರೀತಿ ನೀತಿಗಳಿಂದ ಸುಳ್ಳಾಗಿರಿಸಿದರು. ಹಾಗೂ ತಮ್ಮ ಇಪ್ಪತ್ತನೆಯ ವಯಸ್ಸಿಗೆ ನಾಟಕ ನಿರ್ದೇಶಿಸಿ ಅಂತರಾಷ್ಟ್ರೀಯ ಖ್ಯಾತಿಗಳಿಸಿ ಕೊಂಡ ಕ್ರಿಶ್ಚಿಯನ್ ಸ್ಟುಕ್ಲ್ನ ಕೂಡ ತುಂಬಾ ಆತ್ಮೀಯತೆಯಿಂದ ಪ್ರವಾಸದುದ್ದಕ್ಕೂ ಕಂಡುಕೊಂಡರು. ಒಟ್ಟಾರೆ ಯಾಗಿ ಹೇಳುವುದಾದರೆ ಜರ್ಮನ್ ಪ್ರವಾಸದ ಅನುಭವ ತುಂಬಾ ಹೃದಯ ಸ್ಪರ್ಶಿಯಾಗಿತ್ತು.

ಗೀತಾ ಮೋಂಟಡ್ಕ ಸುಳ್ಯ
ಕಲಾವಿದೆ, ರಂಗಾಯಣ, ಮೈಸೂರು.

–: ಜೋಕುಗಳು :–

ಕಲ್ಪನೆಯ ಲೋಕದಲ್ಲಿ...!

★ ಮೇವು ಹಗರಣದಲ್ಲಿ ಭಾಗಿಗಳಾದ ರಾಜಕಾರಣಿಗಳು ಕಡೂಲೇ ರಾಜಿನಾಮೆ ಕೊಡಬೇಕೆಂದು, ಇಲ್ಲದೇ ಹೋದ ಪಕ್ಷದಲ್ಲಿ ದೇಶದಾದ್ಯಂತ ಉಗ್ರ ರಸ್ತೆ ತಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ಗೋವುಗಳ ರಾಷ್ಟ್ರಾಧ್ಯಕ್ಷ ಕೆ. ಬೆಳ್ಳಿ ಗೂಳಿಯವರು ತಿಳಿಸಿದರು.

ಈ ವಿಷಯವನ್ನು ಅವರು ತಮ್ಮ ವಾಸಗೃಹ "ಕಾಮ ಧೇನು ಕೃಪ" ದಲ್ಲಿ ನಡೆದ ಸಭೆಯಲ್ಲಿ ತಿಳಿಸಿದರು.

ಈ ಸಭೆಯಲ್ಲಿ ದೇಶದ ಪ್ರಮುಖ ಗೋವು ಮುಖಂಡರುಗಳು ಭಾಗವಹಿಸಿದ್ದರು. ಕರ್ನಾಟಕದ ಪ್ರಸಿದ್ಧ ಗೋನಾಯ್ಕ ಕರಾದಂತ "ಕೆಂದ" ನವರು ಸಹ ಸಭೆಯಲ್ಲಿ ಹಾಜರಿದ್ದರು. ಹಾಗೂ ಕೋಣ ಎಮ್ಮೆಗಳ ಆಹಾರ ಮತ್ತು ಆರೋಗ್ಯಾಧಿಕಾರಿಗಳಾದ "ಕಾಳಕೋಣ" ನವರೂ ಉಪಸ್ಥಿತರಿದ್ದರು.

★ ಫಾರಂ ಕೋಳಿಗಳಿಗೆ ವಿಧಿಸಿರುವ ಮರಣದಂಡನೆ ಹಾಗೂ ಜೈಲು ವಾಸವನ್ನು ಮೊಟಕುಗೊಳಿಸಿ ಅವರಿಗೂ ಸ್ವಾತಂತ್ರ್ಯ ನೀಡಬೇಕು ಎಂದು ಕೋರಿ, ನಾಟಕೋಳಿಗಳ ಮುಖಂಡರಾದಂತಹ "ಗಿರಿಯ ಹುಂಜ" ನವರು ರಾಷ್ಟ್ರಪತಿಯವರಿಗೆ ಪತ್ರ ಬರೆದಿರುತ್ತಾರೆ. ಹಾಗೂ ದಿನಂಪ್ರತೀ ನಡೆಯುವ "ಕೋಳಿ ಹತ್ಯೆ" ಯನ್ನು ಉಗ್ರವಾಗಿ ಟೀಕಿಸಿದ್ದಾರೆ ಮತ್ತು ಹಳ್ಳಿಗಳಲ್ಲಿ ಕಾಗೆ ಉಗ್ರಗಾಮಿಗಳ ಬರುವಿಕೆಯ ನಿಯಂತ್ರಣಕ್ಕಾಗಿಯೂ ಬರೆದಿರುತ್ತಾರೆ.

★ ಆಧುನಿಕತೆಯ ಭೂತದಿಂದಾಗಿ ದೇಶದಾದ್ಯಂತ ಹಳ್ಳಿಗಳೇ ಇಲ್ಲದ ಕಾರಣ, "ಬದಿಕೇರಿ" ಸಿಟಿಯನ್ನು ಮೀಸಲು ಹಳ್ಳಿಯಾಗಿ ಪರಿವರ್ತಿಸಲಾಗುತ್ತಿದೆ ಎಂದು ಇಂದಿಲ್ಲಿ ನಡದ ಪತ್ರಿಕಾ ಗೋಷ್ಠಿಯಲ್ಲಿ ನಮ್ಮ ಗೃಹ ಖಾತೆಯ ಸಚಿವರು ತಿಳಿಸಿದರು.

ಈಗಾಗಲೇ ಕಾಂಕ್ರೀಟ್ ಕಟ್ಟಡಗಳನ್ನು ನೆಲಸಮಗೊಳಿಸಲಾಗುತ್ತಿದ್ದು, ಅಲ್ಲಿಯ ಜನರಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಹಾಗೆಯೇ ಹಳ್ಳಿ ಅಂದ ಮೇಲೆ ಮರಗಿಡಗಳು ಪ್ರಮುಖವಾಗಿದ್ದು, ಅವುಗಳನ್ನು ಈಗ ನೆಟ್ಟರೆ ಬೆಳೆಯಲು ತುಂಬಾ ವರ್ಷಗಳು ಹಿಡಿಯುವುದರಿಂದ, ಸದ್ಯಕ್ಕೆ ಕೃತಕ ಮರಗಿಡಗಳಿಗಾಗಿ ಅಮೇರಿಕದ ಪ್ರಸಿದ್ಧ ಪ್ಲಾಸ್ಟಿಕ್ ಕಂಪನಿಯೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

● **ಕೆ.ಎಸ್. ಮನೋಹರ,**
ಮದೆನಾಡು.

ಸೂಕ್ತಿ :-

ಧರ್ಮವಿಲ್ಲದ ಮನುಷ್ಯ, ಚುಕ್ಕಾಣಿ ಇಲ್ಲದ ಹಡಗಿನಂತೆ.

- ಕುವೆಂಪು

ಜೀವದಾನ

ವಿದ್ಯಾರ್ಥಿಗಳ ಜೀವನದಲ್ಲಿ ಕಾಲಚಕ್ರ ಬಹಳ ಮಹತ್ವವನ್ನು ಹೊಂದಿರುತ್ತದೆ. ವಸಂತಮಾಸ ಕಳೆದು ಮಳೆಗಾಲ ಆರಂಭವಾಗುತ್ತಿದ್ದಂತೆ ಶಾಲೆ ಕಾಲೇಜುಗಳಿಗೆ ಹೊಸ ವಿಷಯಗಳ ದಾಹದಿಂದ ಬೇಸಿಗೆಯ ರಜೆಯಲ್ಲಿನ ರಸನಿಮಿಷಗಳ ನೆನಪುಗಳಿಂದ ಭಾರವಾದ ದೇಹವನ್ನು ಹೊತ್ತು ಹೆಜ್ಜೆ ಹಾಕುವಾಗ ಒಂದು ರೀತಿಯ ಮೋಜು ಪ್ರಾರಂಭ. ಅದೇ ರೀತಿಯಲ್ಲಿ ಮಳೆ ಚಳಿಗಾಲ ಕಳೆದು ಬೇಸಿಗೆ ಕಾಲ ಪ್ರಾರಂಭವಾಗಿ ಒಂದು ಅಥವಾ ಎರಡನೆಯ ತಿಂಗಳು ಪ್ರಾರಂಭವಾಯಿತು. ಎಂದರೆ ! ಶಾಲಾ ಕಾಲೇಜುಗಳಿಗೆ ವಸಂತಮಾಸದ ರಜೆಯ ಪ್ರಾರಂಭ. ಈ ಋತುವಿನಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮತ್ತೊಂದು ರೀತಿಯ ಸಂಭ್ರಮ.

ಅದೇ ರೀತಿ ನಾನು 1981–82 ನೇ ಶೈಕ್ಷಣಿಕ ವರ್ಷದಲ್ಲಿ ಹೈಯರ್ ಪ್ರೈಮರಿ ಶಾಲೆಯ ಅಂತಿಮ ವರ್ಷದ ವಿದ್ಯಾರ್ಥಿ. ಅಂತು ಏಪ್ರಿಲ್ ತಿಂಗಳ ಮೊದಲ ವಾರಕ್ಕೆ ಪರೀಕ್ಷೆ ಮುಕ್ತಾಯವಾಯಿತು. ಆ ಸಮಯದಲ್ಲಿ ಪ್ರತಿನಿತ್ಯವು ನಿಭ್ರವಾದ ಬಾಂಧಳ. ಆದ್ದರಿಂದ ನೇಸರನ ಕಿರಣಗಳು ಪ್ರತಿಯೊಬ್ಬ ವ್ಯಕ್ತಿಯ ದೇಹವನ್ನು ಯಾವುದೇ ತೊಂದರೆ ಇಲ್ಲದೆ ಮುಂಜಾನೆಯಿಂದ ಅಸ್ತಂಗತದವರೆಗೂ ಮುತ್ತಿಡುತ್ತಿದ್ದವು. ಆದ್ದರಿಂದ ನಿತ್ಯ ತಾಪಮಾನ ಸಹಿಸಲಾಗದು. ಈ ರೀತಿಯ ವಾತಾವರಣ ನಗರ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸರ್ವಸಾಮಾನ್ಯವಾಗಿತ್ತು.

ನಮ್ಮದೊಂದು ಕುಗ್ರಾಮ. ಇದು ಭಾರತದ ಪಶ್ಚಿಮ ಮತ್ತು ಪೂರ್ವ ಘಟ್ಟಗಳು ಸಂಧಿಸುವ ನೀಲಿ ಬೆಟ್ಟಗಳ ತಪ್ಪಲಿನಲ್ಲಿ ನಲಿದಾಡುವ ಸುಂದರ ತಾಣ ವನದೇವಿ ನರ್ತಿಸುವ ರಂಗಮಂದಿರದಂತೆ ಎದ್ದು ಕಾಣುವ ಕರುನಾಡ ತೆಂಕಣದಿಕ್ಕಿನ ಅಂಚಿನಲ್ಲಿರುವ ಊರೇ ಮಂಗಲ. ಈ ಊರಿನಲ್ಲಿ ನಮ್ಮದೊಂದು ಅಗರ್ಭ ಶ್ರೀಮಂತರೆನಿಸಿಕೊಳ್ಳಲಾಗದಿದ್ದರೂ, ಬೇರೆಯವರನ್ನು ಆಶ್ರಯಿಸದೆ ಜೀವನ ಸಾಗಿಸುವಂತ, ಸ್ವಾಭಿಮಾನ, ಗೌರವಾನ್ವಿತ ಎಂಬ ಪದಗಳಿಗೆ ಅತೀ ಸಮೀಪವಾದ ಕುಟುಂಬ. ನಮ್ಮ ತಂದೆ ತಾಯಿಯವರಿಗೆ ಮಹಾಭಾರತದ ಪಂಚ ಪಾಂಡವರು ಇರುವಂತೆ ಐವರು ಗಂಡು ಮಕ್ಕಳು. ನಾನು ಮಧ್ಯಮ ಪಾಂಡವ ಅರ್ಜುನನಾಗದಿದ್ದರು ಸಿದ್ದರಾಜು ಹೆಸರಿಗೆ ತಕ್ಕಂತೆ ರೆಡಿಕಿಂಗ್. ಓದುವ ಸಮಯ, ಭೋಜನ ಸಮಯ, ಆಟದ ಸಮಯ ಇವುಗಳನ್ನು ಅತೀ ಜಾಗರೂಕತೆಯಿಂದ ಬಳಸಿಕೊಳ್ಳುತ್ತಿದ್ದೆ. ಈ ಎಲ್ಲಾ ರಂಗದಲ್ಲಿಯೂ ಎಲ್ಲರಿಗಿಂತಲೂ ಮಾದರಿಯಾಗಿರುತ್ತಿದ್ದೆ. ಇದರ ಜೊತೆ ಊಟಕ್ಕೆ ಉಪ್ಪಿನ ಕಾಯಿಯಂತೆ ಸ್ವಲ್ಪ ತುಂಟತನವು ಇತ್ತು.

ಬೇಸಿಗೆ ರಜೆಯಲ್ಲಿ ಶಾಲೆಯ ಗಮನ ಸಂಪೂರ್ಣ ಮರೆತಂತೆ ಇತ್ತು. ಗ್ರಾಮೀಣ ಪ್ರದೇಶದ ರೈತಕುಟುಂಬದ ವಿದ್ಯಾರ್ಥಿಯಾದ ನಾನು ಊರೊಳಗಿನ ಉಷ್ಣಾಂಶವನ್ನು ತಾಳಲಾರದೆ ಇಷ್ಟವಿಲ್ಲದ ನೀರು, ಮಜ್ಜಿಗೆ, ಎಳನೀರುಗಳ ಹೊಳೆಯು ನನ್ನ ಉದರದೊಳಗೆ ಸೇರುತ್ತಿದ್ದವು. ಒಂದು ಸುಂದರ ಮುಂಜಾನೆ ಎದ್ದು ನಿತ್ಯಕರ್ಮಗಳಲ್ಲಿ ಜಳಕವು ಸೇರಿದಂತೆ ಉಪಹಾರ ಮುಗಿಸಿ ಮನೆಯ ಪಕ್ಕದ ಕೊಟ್ಟಿಗೆಗೆ ಹೋದೆ ಅಲ್ಲಿ ಆಡು (ಮೇಕೆ) ಗಳು ಎಳೆ ಕರುಗಳು, ಹಾಲು ಕೊಡುವ ಹಸುಗಳು, ಗಾಡಿ ಎಳೆಯುವ ಹೋರಿಗಳು ಅಂಬಾ ! ಅಮ್ಮಾ ಎಂದು ಶಬ್ದ ಮಾಡಿದವು. ಅವುಗಳನ್ನು ನೋಡಿ ಊರೊಳಗೆ ಬೇಸಿಗೆಯ ತಾಪದಲ್ಲಿ ಉಸಿರು ಕಟ್ಟಿ ಕೂರುವುದಕ್ಕಿಂತ ಆಡು (ಮೇಕೆ) ಗಳನ್ನು ಕಾಡಿಗೆ ಹೊಡೆದು ಮೆಯಿಸಿಕೊಂಡು ಬರೋಣವೆಂದು ಕಾಲಿಗೆ ಚಪ್ಪಲ್, ತಲೆಗೆ ಟವಲ್ ಕೈಗೊಂದು ಕಡ್ಡಿ (ಬೆತ್ತ) ತೆಗೆದುಕೊಂಡು ಅಮ್ಮನಿಗೆ ವಿಷಯ ತಿಳಿಸಿದೆ. ಅವರು ನೀನ್ಯಾಕೋ ಹೋಗ್ತೀಯ "ನೆರಳಿ ಕಪ್ಪೆಯನ್ನು ಬಿಸಲಿಗೆ ಬಿಟ್ಟಂತಾಗುತ್ತದೆ" ಎಂದರು. ಇರಲಿ ಎಂದು ಮೇಕೆಗಳನ್ನು ಕೊಟ್ಟಿಗೆಯಿಂದ ಬಿಟ್ಟು ಸಣ್ಣ ಮರಿಗಳು ಹಾಲು ಕುಡಿದು ಚಂಗನೆ ಜಿಗಿದು ಮತ್ತೆ ತಾಯಿ ಆಡಿನ ಜೊತೆಯಲ್ಲಿ ಕಾಡಿಗೆ ನಾವು ಬರುತ್ತೇವೆಂದು ಹಟಮಾಡಿದೆವು. ಅವುಗಳನ್ನು ಹಿಡಿದು ಮನೆಯಲ್ಲೆ ಬಿಡುವಾಗ ನನಗೆ ಆಯಾಸವಾದಂತಾಯಿತು. ಅಂತು ಬೀದಿಗೆ ಹೋದೆ. ಊರಿನ ಇತರರ ಮನೆಗಳ ಮೇಕೆಗಳ ಹಿಂಡುಗಳು ನನ್ನನ್ನು ಬಂದು ಸೇರಿದವು. ಅಂತು ಹತ್ತು ಗಂಟೆಗೆ ಕಾಡು ತಲುಪಿದೆವು. ಮೇಕೆಗಳು ನಾ ಮುಂದು, ತಾ ಮುಂದು ಎಂದು ಹೊಟ್ಟೆತುಂಬಿಸಲು ಮುಂದಾಗುತ್ತಿದ್ದವು. ಇವುಗಳ ನಿಯಂತ್ರಣ ಒಂದು ದೊಡ್ಡ ಸಮಸ್ಯೆಯಾಯಿತು. ಮತ್ತೊಂದು ಕಡೆ ಮಾಂಸಹಾರಿ ತೋಳ ಮತ್ತು ನಾಯಿಗಳು ಎಲ್ಲಿ ಮೇಕೆಗಳನ್ನು ಕೊಂಡೊಯ್ದು ಬಿಡುತ್ತವೆ ಎನ್ನುವ ಭಯ.

ಅಂತು ನಡುಬಿಸಿಲಿನ ಒಂದು ಗಂಟೆಯಾಯಿತು. ಮೇಕೆಗಳು ಬಾಯಾರಿಕೆಯಾಗಿರುವುದನ್ನು ತೋರಿಸಲು ತಿನ್ನುವುದನ್ನು ನಿಲ್ಲಿಸಿದವು. ನನಗೆ ಊರೊಳಗಿನ ತಾಪಕ್ಕಿಂತ ಕಾಡೊಳಗಿನ ತಾಪಮಾನದ ಜೀವನ ಉತ್ತಮವೆಂದಾಯಿತು. ನೆರಳು ಸಿಕ್ಕಿದ ಕಡೆಯಲೆಲ್ಲ ಒಂದು ಸಣ್ಣ ನಿದ್ದೆಯು ಮುಗಿಯುತಿತ್ತು. ಅಂತು

ಮೇಕೆಗಳಿಗೆ ನೀರಡಿಕೆಯಾಗಿರುವುದು ಖಾತರಿಯಾದ ಮೇಲೆ ಊರಿನ ಮಾರ್ಗದಲ್ಲಿ ಇರುವ ಮಹದೇಶ್ವರ ಕೆರೆಗೆ ಬಂದೆವು. ಕೆರೆ ಅಗಲವಾಗಿ ಇದೆ. ಬಳಿಯಲ್ಲೊಂದು ಪುಟ್ಟ ದೇವಸ್ಥಾನ ಹಾಗಿಯೇ ಕೆರೆಯ ಏರಿಯ ಮೇಲೆ ಒಂದು ಹುಣಸೆ ಮರ ಇತ್ತು. ಆ ಮರದ ನೆರಳಿನಲ್ಲಿ ಮೇಕೆಗಳು ನೀರು ಕುಡಿದು ಮೆಲುಕುಹಾಕುತ್ತ ಬಿದ್ದಿದ್ದವು.

ಮೇಕೆ ಕಾಯುವ ಸಹೋದ್ಯೋಗಿ ಮಿತ್ರರೆಲ್ಲ ಒಂದು ಕಡೆ ಕೂರುವ ಬದಲು ಅವರಿಗೆ ಇಷ್ಟ ಬಂದಂತೆ ಅಡ್ಡಾಡುವಾಗ ಒಬ್ಬನು ಲೋ ಬನ್ನಿ ಈಜು ಹೊಡೆಯುವ ಎಂದ. ಈ ಧ್ವನಿಗೆ ಎಲ್ಲರೂ ಯಾರಿಗೋ ಏನೋ ಆಯಿತು ಎಂದು ದಡಬಡಾಯಿಸಿ ಬಂದು ಸೇರಿದೆವು. ಮತ್ತೆ ಈಜಾಡುವ ವಿಷಯ ಪ್ರಸ್ತಾಪವಾಯಿತು. ಸರ್ವರೂ ಒಮ್ಮತ ವ್ಯಕ್ತಪಡಿಸಿದರು. ಬಳಿಕ ಅಂಗಿಯನ್ನು ಬಿಚ್ಚಿ ರೆಡಿಯಾದೆವು. ಆ ಸಂದರ್ಭದಲ್ಲಿ ಮತ್ತೊಬ್ಬ ಹೇಳಿದ ಈ ಕಡೆ ಬೇಡ ಆ ಕಡೆ ಹೊಸದಾಗಿ ಗುಂಡಿ ತೋಡಿದ್ದಾರಲ್ಲ ಅಲ್ಲಿ ಬದಿ ತೆಗೆದಿದ್ದಾರೆ. ಕೆಸರು ಕಡಿಮೆ ಅಲ್ಲಿ ಚೆನ್ನಾಗಿರುತ್ತದೆ ಬನ್ನಿ ಆ ಕಡೆ ಹೋಗೋಣವೆಂದನು. ನಾವೆಲ್ಲರು ಬೇಟೆಗಾರನ ಹಿಂದೆ ನಾಯಿಗಳು ಹೋಗುವಂತೆ ಬಸಪ್ಪನ ಹಿಂದೆ ಹೋದೆವು. ಎಲ್ಲರೂ ನೀರಿಗೆ ನೆಗೆದರು. ನಾನು ಉತ್ತಮ ಈಜುಗಾರನಾಗದಿದ್ದರೂ, ನೀರಿನಲ್ಲಿ ಮುಳುಗುವವನಂತು ಅಲ್ಲ. ಹಾಗಾಗಿ ಏರಿಯ ಮೇಲೆ ನಿಂತು ಹೊಸದಾಗಿ ಹೂಳು (ಕೆಸರು) ತೆಗೆದಿದ್ದ ಕೆರೆಗೆ ನೆಗೆದೆ. ನಂತರ 2 ನಿಮಿಷ ಈಜಿದವನು ಎಲ್ಲರನ್ನು ನೋಡೋಣವೆಂದು ನಿಲ್ಲಲು ಕಾಲುಬಿಟ್ಟೆ. ನೀರು ಭುಜಕ್ಕೆ ಬಂತು, ಕತ್ತಿನ ಭಾಗಕ್ಕೆ ಬಂತು. ಕಾಲಿಗೆ ನೆಲವೇ ಸಿಗಲಿಲ್ಲ. ಮತ್ತೆ ನೀರು ಬಾಯಿಗೆ ಬಂತು, ನಂತರ ತಲೆಯೇ ಮುಳುಗಿತು. ನಂತರ ನಾನು ನೀರಿನಿಂದ ಮೇಲೆ ಜಿಗಿದು ಈಜಲು ಪ್ರಯತ್ನಿಸಿದರೆ ಆಗುವುದೇ ಇಲ್ಲ. ಕಿವಿ ಮೂಗಿನಲ್ಲಿ ನೀರು ತುಂಬಿತು. ಬೇರೇನು ಮಾಡಬೇಕೆಂಬುದೆ ತೋಚಲಿಲ್ಲ. ದೇಹದಲ್ಲಿ ಹೃದಯ ಸ್ತಂಭನ ನಿಂತಂತೆ ಗೋಚರಿಸಿತು. ನೀರಿನಲ್ಲಿ ಮುಳುಗುವವನಿಗೆ ಹುಲ್ಲುಕಡ್ಡಿ ಸಿಕ್ಕಿದರೂ ಸಾಕು ಎಂಬಂತೆ ! ನನ್ನ ಕೈಗಳನ್ನು ಬಸಪ್ಪನ ಕಡೆ ತಿರುಗಿಸಿ ಸನ್ನೆ ಮಾಡಿದೆ ಅವನು ದುರದೃಷ್ಟವಶಾತ್ ಎಂಬಂತೆ ತನ್ನ ಕಡೆ ಈಜಿಕೊಂಡು ಬರುತ್ತಿದ್ದನೊ ಏನೊ ಅಂತು ಎರಡು ಬಾರಿ ನೀರಿಗೆ ಮುಳುಗಿದ್ದರೂ ಸಹ ಕೈಗಳು ನನಗೆ ಗೊತ್ತಿಲ್ಲದಂತೆ ಬಸಪ್ಪನ ಕಡೆ ಸನ್ನೆ ಮಾಡುತ್ತಿದ್ದವು. ಕಡೆಗೂ ಮರಗಟ್ಟಿದ ಕೈಗೆ ಏನೋ ತಗುಲಿದ ಅನುಭವವಾಯಿತು. ಅಷ್ಟೇ ಗೊತ್ತು ! ಮತ್ತೆ ನನ್ನನ್ನು ದಡಸೇರಿಸುವಾಗ ಮತ್ತಷ್ಟು ನೀರು ನನ್ನ ಹೊಟ್ಟೆ, ಕಿವಿ, ಮೂಗೊಳಗೆ ಸರಾಗವಾಗಿ ಮನೆ ಮಾಡುತ್ತಿದುದ್ದರಿಂದ ಜ್ಞಾನವೇ ತಪ್ಪಿತು. ನಂತರ ದಡದಲ್ಲಿ ತಂದು ಮಲಗಿಸಿ ಬೆನ್ನು ಒತ್ತಿದಾಗ ನೀರು ಬಾಯಿ, ಮೂಗುಗಳಿಂದ ನಿಧಾನವಾಗಿ ಹೊರಬಂದಂತೆ ಮರಗಟ್ಟಿದ ಕೈಕಾಲುಗಳಿಗೆ "ಮರಳಿ ಮಣ್ಣಿಗೆ" ಎನ್ನುವಂತೆ ನರಗಳಲ್ಲಿ ನಿಂತಿದ್ದ ರಕ್ತವು ಚಲಿಸಲು ಪ್ರಾರಂಭಿಸಿದಂತೆ ನನ್ನ ದೇಹದ ಇತರ ಅಂಗಗಳು ಚುರುಕುಗೊಂಡವು. ಅವುಗಳಲ್ಲಿ ನಾವೇ ಮೊದಲಿಗರು ಎನ್ನುವಂತೆ ಕಣ್ಣುಗಳು ಮೊದಲು ತೆರೆದವು. ಆ ಬಳಿಕವೇ ಬಾಯಿ ಸಿಡಿಮಿಡಿಗೊಂಡು ನನಗರಿವಿಲ್ಲದಂತೆಯೇ ಬಾಯಿ, ಕೈಗಳು ಸೇರಿದಂತೆ ಲೋ ಬಸಪ್ಪ ಜೀವದಾನ ಮಾಡಿದೆ ಕಣೋ ಜೀವದಾನ ಮಾಡಿದೆ ಎಂದೆ ! ಆ ಸಂದರ್ಭಗಳು ನನ್ನ ಜೀವನದಲ್ಲಿನ ಅತ್ಯಮೂಲ್ಯವಾದ ಸಮಯಗಳಲ್ಲಿ ನೆನಪಿಗೆ ಬರುತ್ತಿದೆ. ಆದರೆ ಬಸಪ್ಪನಿಗೆ ಇದರ ನೆನಪೇ ಇಲ್ಲ. ಆದರೆ ನಾನಂತು ಜೀವದಾನ ಪಡೆದದ್ದು ಅಕ್ಷರಶಃ ಸತ್ಯ.

ಬಿ. ಸಿದ್ದರಾಜು, ಎಂ. ಎ. ಡಿ. ಇ. ಪಿ
ಭೂಗೋಳ ಉಪನ್ಯಾಸಕರು,
ಮದೆ ಮಹೇಶ್ವರ ಪದವಿ ಪೂರ್ವ ಕಾಲೇಜು
ಮದೆ, ಮಡಿಕೇರಿ ತಾಲ್ಲೂಕು,
ಕೊಡಗು ಜಿಲ್ಲೆ.

–ಚುಟುಕು–

ಸಾಯಿಬಾಬ

ಪುಟ್ಟಪರ್ತಿಯ ಸಾಯಿಬಾಬ ಶೂನ್ಯದಿಂದ
ಸೃಷ್ಟಿಸುತ್ತಾರಂತೆ ವಿಭೂತಿ, ಲಾಡು, ಕನಕದುಂಗುರ
ಇಷ್ಟು ಮಾಡುವವರು
ಸತ್ತವರನ್ನು ಬದುಕಿಸುವುದಿಲ್ಲವೇಕೆ ?

'ಹೀರೋ'

ಸಿನಿಮಾದಲ್ಲಿ ಹತ್ತು, ಹನ್ನೆರಡು ರೌಡಿಗಳನ್ನು
ಒಮ್ಮೆಗೆ ಹೊಡೆದು ಹಾಕಿ "ಹಿರೋ" ಆದವನು,
ನಿಜ ಜೀವನದಲ್ಲಿ ಒಂದು ಇಲಿಯನ್ನು ಕಂಡು
ಹೆದರಿ 'ಝೀರೋ' ಆಗಿಬಿಟ್ಟನಲ್ಲೊ.

-ಪೂನ್ನೇಟಿ ಬಿ. ಸುನೀಲ್
ಭಾಗಮಂಡಲ, ಕೊಡಗು

ಭರವಸೆಯ ಕ್ರೀಡಾಪಟು - ಹುಲಿಮನೆ ಆರ್. ಮಂಜುಳ

ಮದೆನಾಡಿನ 'ಮಿನುಗುತಾರೆ' ಕುಮಾರಿ ಮಂಜು, ಹುಲಿಮನೆ ಶ್ರೀ ರಾಮಣ್ಣ ಮತ್ತು ಶ್ರೀಮತಿ ಚಂದ್ರಾವತಿ ಇವರ ನಾಲ್ವರು ಮಕ್ಕಳಲ್ಲಿ ಈಕೆ ಕೊನೆಯ ಮಗಳು. ಮಳೆಯ ಬೀಡು ಎನಿಸಿದ ಗಿರಿಕಂದರಗಳ ನಾಡು ಮದೆನಾಡು. ಇಳಿದರೆ ಹಳ್ಳ, ಏರಿದರೆ ಗುಡ್ಡ. ನಿಜ ಹೇಳಬೇಕೆಂದರೆ ಆಟದ ಮೈದಾನವೇ ಇಲ್ಲದ ಊರು ! ಆಹಾ ! ಇಂಥಾ ಊರಿನ ಜಿಂಕೆ ಮರಿಯೊಂದು ಜಿಗಿದುದು 4ನೇ ರಾಷ್ಟ್ರೀಯ ಕ್ರೀಡಾಕೂಟಕ್ಕೆ ! ಕರ್ನಾಟಕದ ಹಾಕಿ ತಂಡಕ್ಕೆ ಇಬ್ಬರು ವನಿತೆಯರು ಕೊಡಗಿನಿಂದ ಆಯ್ಕೆಯಾದರು. ಅವರಲ್ಲಿ ಒಬ್ಬಳು ತಮಿಳಿನ ಕ್ರಿಸ್ಟಿ



ಹುಲಿಮನೆ ಆರ್. ಮಂಜುಳ

ಎಲಿನ. ಇನ್ನೊಬ್ಬಳು ಮಂಜುಳ. ಮಂಜುಳಾಳ ಜಿಂಕೆಯ ನೋಟ ಮತ್ತು ಮಿಂಚಿನ ಓಟವೇ ಕರ್ನಾಟಕದ ಮಹಿಳಾ ಹಾಕಿ ತಂಡಕ್ಕೆ ಸೆಳೆದುಕೊಂಡಿತು. 4ನೇ ರಾಷ್ಟ್ರೀಯ ಕ್ರೀಡಾಕೂಟವಲ್ಲಿ ಭಾಗವಹಿಸಿದ ಕೊಡಗಿನ ಏಕೈಕ ಕನ್ನಡತಿ ಹುಡುಗಿ ಎಂಬ ಕೀರ್ತಿ ಮಂಜುಳಾಗೆ ಸೇರಿದೆ.

ಮದೆನಾಡಿನ ಗೋಳಿಕಟ್ಟೆ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ಮಂಜುಳ ಮುಂದಿನ ಪ್ರೌಢ ಶಿಕ್ಷಣಕ್ಕೆ ಮಡಿಕೇರಿಗೆ ಹೋಗಬೇಕಾಯಿತು. ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (SAI)ದ ಹಾಸ್ಟೆಲ್‌ನಲ್ಲಿ ಸೇರಿಕೊಂಡಳು. ಒಂದೆಡೆ ಕ್ರೀಡೆ, ಇನ್ನೊಂದೆಡೆ ವ್ಯಾಸಂಗ. ಇವೆರಡನ್ನು ಏಕ ಕಾಲಕ್ಕೆ ಆಯ್ಕೆಮಾಡಿಕೊಂಡಳು. ಛಲ ಬಿಡದ ಈಕೆ ಕ್ರೀಡೆಯ ನಡುವೆಯೇ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 57 ಅಂಕಗಳಿಸಿ ತೇರ್ಗಡೆಯಾದಳು.

ಈ ಎಳೆಯ ಚಿಗರೆ ಮರಿ ತನ್ನ ವಯಸ್ಸಿಗಿಂತಲೂ ಹೆಚ್ಚು ಸಾಧಿಸಿದ್ದಾಳೆ. ಜಿಲ್ಲಾ ಮಟ್ಟದಲ್ಲಿ ನಡೆಯುವ 200 ಮೀ. 400 ಮೀ. 800 ಮೀ. ಮತ್ತು 3 ಕಿ. ಮೀ. ರಸ್ತೆ ಓಟ – ಈ ಎಲ್ಲಾ ಓಟಗಳ ಸ್ಪರ್ಧೆಯಲ್ಲಿ ಮಂಜು ಭಾಗವಹಿಸಿದಳೆಂದರೆ ಉಳಿದ ಸ್ಪರ್ಧಿಗಳು ಮೊದಲ ಸ್ಥಾನವನ್ನು ಕಳೆದುಕೊಂಡಂತೆ ! ಸದಾ ಮೊದಲ ಸ್ಥಾನವನ್ನು ತಬ್ಬಿಕೊಳ್ಳುವ ಈಕೆಗೆ ಅಲ್ಲೊಂದು ಇಲ್ಲೊಂದು ಎರಡನೇ ಸ್ಥಾನ ಬಂದಿರಬಹುದು. ಆದರೆ 3ನೇ ಸ್ಥಾನ ಈಕೆಗೆ ಬೇಕೂ ಇಲ್ಲ ! ಸುಮಾರು ಐವತ್ತಕ್ಕೂ ಅಧಿಕ ಸರ್ಟಿಫಿಕೇಟುಗಳು ಇವಳ ಬಳಿ ಇದೆ. ಆರು ಚಿನ್ನದ ಪದಕಗಳು, ಬೆಳ್ಳಿ ಪದಕ ಈಕೆಯ ಕೊರಳನ್ನು ಅಲಂಕರಿಸಿವೆ. 'ಕಪ್'ಗಳು ಸಾಕಷ್ಟು ಇವೆ.

ಓಟದ ರಾಣಿಯಾಗಿ ಮೆರೆಯುತ್ತಿರುವ ಮಂಜು ಹಾಕಿ ಆಟದತ್ತ ಒಲವು ತೋರಿದ್ದೊಂದು ವಿಶೇಷ. ಕರ್ನಾಟಕ ರಾಜ್ಯ ಮಹಿಳಾ ಹಾಕಿ ಲೀಗ್‌ನಲ್ಲಿ ಮತ್ತು 20ನೇ ರಾಜ್ಯಮಟ್ಟದ ಮಹಿಳಾ ಹಾಕಿ ಕ್ರೀಡಾಕೂಟದಲ್ಲಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸಿದ ರಾಜ್ಯಮಟ್ಟದ ಹಾಕಿ ಕ್ರೀಡಾಕೂಟದಲ್ಲಿ ಭರವಸೆಯ ಆಟಗಾರ್ತಿಯಾಗಿ ಮಿಂಚಿದಳು. ಮೊನ್ನೆ ನಡೆದ 4ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ರಾಜ್ಯ ಹಾಕಿ ತಂಡಕ್ಕೆ ಸೆಂಟರ್ ಆಫ್‌ನಲ್ಲಿ ಆಡಲು ಆಯ್ಕೆಯಾದಳು. ಈ ಸಂದರ್ಭದಲ್ಲಿ ಅವಕಾಶ ಮಾಡಿಕೊಟ್ಟ ಹಾಕಿ ಕೋಚ್ ಶ್ರೀ ವಿಶ್ವನಾಥ್ ಮತ್ತು ಮಡಿಕೇರಿಯ 'ಸಾಯ್' ಸಂಸ್ಥೆಯನ್ನು ಸದಾ ಹೆಮ್ಮೆಯಿಂದ ನೆನೆಯುತ್ತಾಳೆ.

ಇವಳ ಸಾಧನೆ ಆಟೋಟಗಳಲ್ಲಿ ಮಾತ್ರ ಎಂದು ಸುಮ್ಮನಾಗುವಂತಿಲ್ಲ. ರಾಜ್ಯಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶವೊಂದು ಜರುಗಿತು. ಆ ಸಂದರ್ಭದಲ್ಲಿ "ವೃಕ್ಷ ಸಮೀಕ್ಷೆ" ಎಂಬ ವಿಷಯದ ಕುರಿತು ಬರೆದ ಪ್ರಬಂಧಕ್ಕೆ 20ನೇ ರ್‍ಯಾಂಕ್ ಪಡೆದು ಗೌರವಿಸಲ್ಪಟ್ಟಳು. ಅಷ್ಟೇ ಅಲ್ಲ. 'ಸ್ವಾಮಿ'

ವಿವೇಕಾನಂದ' ಕುರಿತು ಬರೆದ ಪ್ರಬಂಧಕ್ಕೆ ರಾಜ್ಯಮಟ್ಟದಲ್ಲಿ ಎರಡು ಸಾವಿರ ರೂಪಾಯಿಗಳ ನಗದು ಪುರಸ್ಕಾರವೂ ದೊರಕಿತ್ತು. ಈ ಯಶಸ್ವಿಯ ಹಿಂದಿರುವ ಗುರುಗಳನ್ನು ಸದಾ ಸ್ಮರಿಸಿಕೊಳ್ಳುವಳು.

ನಿನಗೆ ಕ್ರೀಡೆಯಲ್ಲಿ ಆಸಕ್ತಿ ಹೇಗೆ ಬಂತೆಂದು ಕೇಳಿದರೆ, "ಶಾಲಾ ಮಟ್ಟದಲ್ಲಿ ನಡೆಸುತ್ತಿದ್ದ ಕ್ರೀಡಾಕೂಟದಲ್ಲಿ ಸ್ಥಾನಗಳಿಸುತ್ತಿದ್ದುದು ಮತ್ತು ಊರಿನಲ್ಲಿ ಕೈಲ್ ಪೋಳ್ದ್ ಹಬ್ಬದ ಸಂದರ್ಭದಲ್ಲಿ ನಡೆಸುತ್ತಿದ್ದ ಕ್ರೀಡೆಯಲ್ಲಿ ಭಾಗವಹಿಸಿ ಬಹುಮಾನ ಪಡೆಯುತ್ತಿದ್ದುದು, ಈ ರೀತಿಯ ಬಹುಮಾನವನ್ನು ಮತ್ತೆ ಮತ್ತೆ ಪಡೆಯಬೇಕೆಂದು ಯೋಚಿಸಿದ್ದೆ. ಆ ನನ್ನ ಯೋಚನೆಗೆ ಸರಿಯಾಗಿ ತಂದೆ, ತಾಯಿ, ಅಣ್ಣ ಅಕ್ಕಂದಿರು ಮತ್ತು ಗುರುಗಳು ಪುಷ್ಠಿಕೊಟ್ಟರು. ಅದೇ ನನ್ನ ಸಾಧನೆಗೆ ಕಾರಣವಾಯಿತು" ಎನ್ನುತ್ತಾಳೆ. ನೀನೀಗ ರಾಷ್ಟ್ರ ಮಟ್ಟದ ಕ್ರೀಡಾ ಪಟುವಾಗಿದ್ದೀಯ.ಒಂದು ವೇಳೆ ಹಳ್ಳಿಯಲ್ಲಿ ಜರುಗುವ ಕ್ರೀಡಾಕೂಟದಲ್ಲಿ ಭಾಗವಹಿಸುತ್ತೀಯಾ ಎಂದು ಕೇಳಿದರೆ, "ಇಲ್ಲ, ನಾನು ಭಾಗವಹಿಸುವುದಿಲ್ಲ. ಏಕೆಂದರೆ ಅಲ್ಲಿ ನಾನೇ ಮೊದಲಿಗಳಾಗುತ್ತೇನೆ. ಇದರಿಂದ ಇನ್ನೊಬ್ಬ ಕ್ರೀಡಾಳು ಹೊರಬರದೇ ಇರಬಹುದು. ಆದ್ದರಿಂದ ಉಳಿದವರೂ ನನ್ನಂತೆಯೇ ಮೇಲೆ ಬರಬೇಕು. ಅವರಿಗಿರುವ ಆ ಅವಕಾಶವನ್ನು ನಾನು ಕಿತ್ತುಕೊಳ್ಳಲಾರೆ" ಎನ್ನುತ್ತಾಳೆ. ಇದನ್ನೆ ಕ್ರೀಡಾ ಸ್ಫೂರ್ತಿ,ಎನ್ನುವುದು. ಇಷ್ಟು ಕಿರಿಯಳ-ಮನದಲ್ಲಿ ಎಂಥ ದೊಡ್ಡ ಭಾವನೆಯಲ್ಲವೆ? ನನ್ನಂತೆಯೇ ಇನ್ನೊಬ್ಬರು ಆಗಬೇಕೆಂಬ ದೊಡ್ಡ ಗುಣ ಇರುವುದರಿಂದಲೇ ಮಂಜುಳ ಇಂದು ಕ್ರೀಡೆಯಲ್ಲಿ ದೊಡ್ಡವಳು.

ಮಂಜು ಪದವೀಧರೆಯಾಗಬೇಕು. ಅಂತರರಾಷ್ಟ್ರ ಮಟ್ಟಕ್ಕೆ ಹೋಗಬೇಕು. ಒಲಂಪಿಕ್ಸ್‌ನಲ್ಲಿ ಆಡಬೇಕೆಂಬ ಆಕೆಯ ಹೆಬ್ಬಯಕೆ ಕೈಗೂಡಬೇಕು. ಹೆಸರಾಂತ ಕಂಪನಿಗಳಲ್ಲಿ ಮತ್ತು ಬ್ಯಾಂಕ್‌ಗಳಲ್ಲಿ ಈಕೆಯ ಹೆಸರು ದಾಖಲಾಗಬೇಕು. ಒಬ್ಬ ಒಳ್ಳೆಯ ಅಧಿಕಾರಿಯಾಗಿ ಸುಖಜೀವನ ಮಾಡಬೇಕೆಂಬುದೇ ನಮ್ಮೆಲ್ಲರ ಬಯಕೆ. ಸಂಘ ಸಂಸ್ಥೆಗಳಿಂದ ಈಕೆ ಸನ್ಮಾನಿತಳಾಗಬೇಕು. ಪ್ರತಿಭಾವಂತೆ ಮಂಜುಳ ಸದಾ ಮಂಜುಳನಾದ ಗೈವ ಸುಂದರ ಹಕ್ಕಿಯಾಗಲಿ. ಕನ್ನಡ ನಾಡಿನ ಕಂಪನ್ನು ಸಮುದ್ರದ ಆಚೆಗೂ ಬೀರಲಿ. ಹೆತ್ತವರ ಹೊತ್ತವರ ಹೆಸರು ಶಾಶ್ವತವಾಗಲಿ. ಮಂಜುಳಾಳ ಚಿನ್ನದ ಕಾಲುಗಳಿಗೆ ವಜ್ರದ ಶಕ್ತಿ ಬರಲೆಂದು ಹಾರೈಸೋಣ.

● ಬಿ.ಆರ್. ಜೋಯಪ್ಪ, ಮದೆ.

ತಾಯಿಯ ಮಡಿಲಲ್ಲಿ...

ತಂಗಾಳಿ ಪಸರಿಸಲು
ಬಿಸಿಯುಸಿರ ಬಸಿರಿನಲಿ
ಗಿಡ ಮರಗಳವು ಬೀಸಣಿಗೆ
ತವರ ತಾಯ ಮಡಿಲಲ್ಲಿ ॥

ಪಕ್ಷಿ ಸಂಕುಲದ ಗಿಲಕಿ
ಕವಿಯ ಚಿತ್ತದ ಗಣಕಿ
ಭೋರ್ಗರೆತದ ಘಮುಕ
ಹಸಿರುಡುಗೆಯ ಚಮಕ ॥

ಕಾವೇರಮ್ಮನ ಕರುಣೆ
ಇಗ್ಗುತ್ತಪ್ಪನ ಕೃಪೆಯು
ಯಂತ್ರಲೋಕದಿ ಬದುಕು
ತವರ ಸವಿನೆನಪಿನಲಿ ॥

● ಬೋಳನ ಜಯಪ್ರಸಾದ್,
ಮೈಸೂರು.

ಕೊಡಗು

ನೋಡು ಬಾ ಈ ಕೊಡಗು
ಕಾಣುವೆ ಮಲೆನಾಡಿನ ಸೊಬಗು
ಏನೆಂದು ವರ್ಣಿಸಲಿ ಈ ಸೊಬಗ
ಕರುನಾಡ ಈ ಒಂದು ಭಾಗ ॥ ನೋ ॥

ಪ್ರಕೃತಿ ಸೌಂದರ್ಯದ ಆಗರವನ್ನು
ಜನರಲ್ಲಿ ತುಂಬಿರುವ ಪ್ರೀತಿ ಮಮತೆಯನ್ನು
ಬೀಳುವ ತುಂತುರ ಮಳೆ ಹನಿಗಳ
ಬಳುಕಿ ಸಾಗುವ ನೀರಿನ ಜರಿಗಳ ॥ ನೋ ॥

● ಉಳುವಾರ ಭೀಮಯ್ಯ ರಾಜೇಶ್,
ವಿಜಯನಗರ 1ನೇ ಹಂತ,
ಮೈಸೂರು-17.

"ಕೊಡಗಿನ ಗೌಡ ಸಿಂಹಗಳೇ ಎಚ್ಚೆತ್ತು ಎದ್ದೇಳಿ"

(ಹಿಂದಿನ ಸಂಚಿಕೆಯಿಂದ)

ನಮ್ಮದೇ ಆದ ಸಂಸ್ಕೃತಿಯನ್ನು ನಾವು ಉಳಿಸಿ ಬೆಳೆಸಿಕೊಂಡು ಬಂದಿದ್ದಲ್ಲಿ ಈಗ್ಯೆ ನಡೆದ ಕೊಡಗೋತ್ಸವದಲ್ಲಿ "ಕೊಡಗಿನ ಗೌಡರು" ಎಂಬ ನಾಮ ಫಲಕದೊಡನೆ ಮೆರವಣಿಗೆಯಲ್ಲಿ ಎದೆಯುಬ್ಬಿಸಿ ಬೇರೆಯವರಂತೆ ನಾವೂ ಕೂಡಾ ನಡೆಯಬಹುದಿತ್ತಲ್ಲವೇ? ಆದರೂ ಕೂಡಾ ಇನ್ನೂ ಕಾಲ ಮಿಂಚಿಲ್ಲ. ಕಾಲ ಮಿಂಚುವ ಮೊದಲೇ ಎಚ್ಚೆತ್ತು ಎದ್ದೇಳದಿದ್ದಲ್ಲಿ ಕೊಡಗು ಪ್ರತ್ಯೇಕ ರಾಜ್ಯವಾದಲ್ಲಿ ನಮ್ಮ ಕೊಡಗಿನ ಗೌಡರ ಭವಿಷ್ಯ ಅಂದಾಕಾರದಲ್ಲಿ ಮುಳುಗುವುದೆಂಬುವುದರಲ್ಲಿ ಸಂಶಯವಿಲ್ಲ. ಆದುದರಿಂದ ಜನಾಂಗದ ಏಳಿಗೆಯತ್ತ ಕ್ರಾಂತಿಕಾರಕ ಹೆಜ್ಜೆ ಇಡಲು ನಾವೆಲ್ಲರೂ ಟೊಂಕ ಕಟ್ಟಿ ನಿಲ್ಲುತ್ತೇವೆ ಎಂದು ಶಪಥ ಮಾಡಬೇಕಾದ ಕಾಲ ಈಗ ಕೂಡಿ ಬಂದಿದೆ. ಇದಕ್ಕೆ ನಾವು ಮಾಡಬೇಕಾದ ಮುಖ್ಯ ಕೆಲಸವೆಂದರೆ,

1. ಇನ್ನು ಮುಂದೆ ನಮ್ಮ ಜನಾಂಗದವರ ಮದುವೆಯಲ್ಲಿ ಗಂಡಸರೆಲ್ಲರೂ ಬಿಳಿಯ ಕುಪ್ಪಸ, ಕೇಸರಿ ದಟ್ಟಿ, ರುಮಾಲು ಚೂರಿಕತ್ತಿಯ ಉಡುಗೆ ತೊಡುಗೆಗಳಿಂದ ಅಲಂಕರಿಸಿಕೊಳ್ಳಬೇಕು. ಹೆಂಗಸರು ಗೇಂಟಿ ಕಟ್ಟಿ ಸೀರೆ ಉಡಬೇಕು. ಒಂದು ವೇಳೆ ಕಾರಣಾಂತರಗಳಿಂದ ಒಂದೇ ಹಂತದಲ್ಲಿ ಈ ಉಡುಗೆ ತೊಡುಗೆಯನ್ನು ಎಲ್ಲರೂ ಧರಿಸಲು ಸಾಧ್ಯವಾಗದಿದ್ದಲ್ಲಿ ಕೊನೆಯ ಪಕ್ಷ ಮದು ಮಗ, ಮದು ಮಗಳು ಹಾಗೂ ಆಡೋಳಿ ಕಂಚಿಮಿಯರಿಂದ ಪ್ರಾರಂಭಿಸುವುದು ಸೂಕ್ತವೆಂದೆನಿಸುವುದು. ಉಳಿದವರಿಗೆ ಹಂತ ಹಂತವಾಗಿ ಈ ಉಡುಗೆ ತೊಡಿಗೆಗಳನ್ನು ಕಡ್ಡಾಯಗೊಳಿಸುವುದೇ ಎಂಬ ಬಗ್ಗೆ ಅಮೂಲಾಗ್ರವಾಗಿ ಚರ್ಚಿಸುವುದು ಸೂಕ್ತವೆಂದೆನಿಸುವುದು. ಒಂದು ವೇಳೆ ಈ ಉಡುಗೆಯ ಅವಶ್ಯಕತೆ ಇಲ್ಲವೆಂದಾದಲ್ಲಿ ಈಗ ಧರಿಸುವ ಕೋಟು ಕಚ್ಚೆಯ ಜೊತೆಗೆ ರುಮಾಲಿನ ಅವಶ್ಯಕತೆಯಾದರೂ ಏನಿದೆ? ಕೇವಲ ಶರಟು ಚಡ್ಡಿ ಸಾಕಲ್ಲವೇ?

2. ಎರಡನೆಯದಾಗಿ, ನಮ್ಮದೇ ಆದ ಜನಾಂಗದ ಸಭೆ ಸಮಾರಂಭಗಳಲ್ಲಿ ನಮ್ಮ ಅರೆಗನ್ನಡ ಭಾಷೆಯನ್ನು ಎಲ್ಲರೂ ಕಡ್ಡಾಯವಾಗಿ ಮಾತನಾಡಬೇಕೆಂಬ ನಿರ್ಬಂಧ ವಿಧಿಸಬೇಕಾಗಿದೆ. ನಮ್ಮ ಅರೆಗನ್ನಡ ಭ ಷೆಯ ಕೆಲವು ಶಬ್ದಗಳನ್ನು ರನ್ನ ಕವಿಯು ತನ್ನ "ಗದಾಯುದ್ಧ"ದಲ್ಲಿ ಬಳಸಿರುವುದು ಕಂಡು ಬರುತ್ತಿದೆ. ಅಂದರೆ ಈ ನಮ್ಮ ಭಾಷೆ ಬಹು ಪ್ರಾಚೀನವಾದದ್ದು ಎಂಬುವುದಕ್ಕೆ ಸಂಶಯವಿಲ್ಲ ಎಂದ ಮೇಲೆ ನಾವು ಹೆಮ್ಮೆ ಪಡಬೇಕಲ್ಲವೇ?

ಈ ಮೇಲೆ ಹೇಳಿದ ಎರಡು ವಿಚಾರದಲ್ಲಿ ನಾವು ಕಟ್ಟುನಿಟ್ಟಿನ ಕ್ರಮ ವಹಿಸದಿದ್ದಲ್ಲಿ ಪಡುವಣ ದಿಗಂತದತ್ತ ಸಾಗುತ್ತಿರುವ ನಮ್ಮ ಕೊಡಗು ಗೌಡ ಜನಾಂಗದ ಸಂಸ್ಕೃತಿಯು ಅಸ್ತಂಗತವಾಗದಂತೆ ತಡೆಹಿಡಿಯಲು ಸಾಧ್ಯವಿಲ್ಲ ಎಂಬುವುದು ನಮ್ಮ ಅಭಿಪ್ರಾಯ.

ಈ ಮೇಲೆ ಹೇಳಿರುವ ವಿಷಯದತ್ತ ನಮ್ಮ ಜನಾಂಗದ ಮುಖ್ಯಸ್ಥರು ಗಮನ ಹರಿಸದಿದ್ದಲ್ಲಿ ನಮ್ಮ ಕೊಡಗಿನ ಗೌಡರ ಹೆಸರು ಕ್ರಮೇಣ ಕಾಲಗರ್ಭದಲ್ಲಿ ಸೇರಿ ಹೋಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಕೊಡಗಿನ ಗೌಡ ಜನಾಂಗದ ಹೆಸರು ಮತ್ತು ಅವರ ಸಂಸ್ಕೃತಿಯು ಅಜರಾಮರವಾಗಿ ಉಳಿಯುವಂತಾಗಲು ನಮ್ಮ ಸಂಘ ಸಂಸ್ಥೆಯವರು ಆಸಕ್ತಿ ವಹಿಸಿ ಸಭೆ ಕರೆದು ಸಭೆಯಲ್ಲಿ "ಕೊಡಗಿನ ಗೌಡರ" ಮುಂದಿನ ಭವಿಷ್ಯದ ಬಗ್ಗೆ ಕೂಲಂಕುಷವಾಗಿ ಸಿಂಹಾವಲೋಕನ ಕ್ರಮದಿಂದ ವಿಚಾರಮಂಥನ ಮಾಡಿ ಕಟ್ಟುಕಟ್ಟಲೆಗಳ ಬಗ್ಗೆ ನಿರೂಪ ಹೊರಡಿಸಿದರೆ ನಾವೇ ಧನ್ಯರು ಹಾಗೂ ನಮ್ಮ ಸಂಸ್ಕೃತಿಯ ಉಳಿವು. ಅಲ್ಲದೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಚಿರನಿದ್ರೆ ಗೈದು ನಮ್ಮ ನಿಮ್ಮೆಲ್ಲರ ಅಂತರಂಗದಲ್ಲಿ ನೆಲೆಸಿರುವ ದಿವಂಗತ ಗುಡ್ಡೇರ ಅಪ್ಪಯ್ಯನವರ ಆತ್ಮಕ್ಕೂ ಶಾಂತಿ ದೊರೆತಂತಾಗುವುದು.

ಅ. ಕೃ. ಶಿವರಾಯ್
100-ಬಿ 'ಶರತ್' ಆನಂದಮಾರ್ಗ
ಸಿದ್ಧಾರ್ಥನಗರ, ಮೈಸೂರು-11

-: ಸೂಕ್ತಿ :-

- ಮನಸ್ಸು ನಿರ್ಮಲವಾಗಿದ್ದರೆ ಮಾಡುವ ಕೆಲಸ ಕೂಡ ಒಳ್ಳೆಯದಾಗುತ್ತದೆ. – ಲೆನಿನ್
- ಪಡೆವ ಧಾನಕ್ಕಿಂತ ಕೊಡುವ ಧಾನವೇ ಮಿಗಿಲು. – ಬೈಬಲ್
- ನಿಶ್ಚಿಂತ ಹೃದಯ ದೀರ್ಘ ಕಾಲ ಬದುಕುವುದು. – ಶೇಕ್ಸ್‌ಫಿಯರ್
- ಪಕ್ಷಿಗಳಲ್ಲಿ ಕೆಲವಕ್ಕೆ ಮಾತು ಬರುತ್ತದೆ. ಆದರೆ ಅವುಗಳಿಗೆ ಸುಳ್ಳು ಬಾರದು. –ಸರೋಜಿನಿದೇವಿ

ಸಂಗ್ರಹ : ಪೊನ್ನೇಟಿ ಬಿ. ಸುನಿಲ್, ಭಾಗಮಂಡಲ

ಹಾಂಗ್‌ಕಾಂಗ್‌ನಲ್ಲಿ ಭಾರತೀಯನ ಬವಣೆ

1997ರ ಜೂನ್ 30ರಂದು ಹಾಂಗ್ ಕಾಂಗ್‌ನಲ್ಲಿ ಬ್ರಿಟೀಷರ 156 ವರುಷಗಳ ಆಡಳಿತ ಕೊನೆಗೊಂಡಿದೆ. ಈಗ ಹಾಂಗ್ ಕಾಂಗ್ ಚೀನದೊಂದಿಗೆ ವಿಲೀನಗೊಂಡು ಅದರ ಒಂದು ಪ್ರಾಂತ್ಯ ಮಾತ್ರ. ಈ ಸಂದರ್ಭದಲ್ಲಿ ಉದ್ಭವಿಸುವ ಪ್ರಶ್ನೆ, ಹಾಂಗ್‌ಕಾಂಗ್‌ನ ಜನಸಂಖ್ಯೆಯಲ್ಲಿ ಶೇಕಡ 0.4ನ್ನು, ಅದರ ಆರ್ಥಿಕ ಚಟುವಟಿಕೆಯಲ್ಲಿ ಶೇಕಡ 10ರಷ್ಟನ್ನು ಆಕ್ರಮಿಸಿಕೊಂಡ ಭಾರತೀಯರ ಪರಿಸ್ಥಿತಿ ಏನು? ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಹೊಂದಿದ ಹಾಂಗ್‌ಕಾಂಗ್ ಸಮಾಜಶಾಹಿ ಆರ್ಥಿಕ ವ್ಯವಸ್ಥೆಯ ಚೀನದೊಂದಿಗೆ ವಿಲೀನವಾದಾಗ, ಚೀನ ಹಾಂಗ್ ಕಾಂಗ್‌ನಲ್ಲಿ ಆ ವ್ಯವಸ್ಥೆಯನ್ನು ಮುಂದುವರಿಸಲು ಅವಕಾಶ ನೀಡಬಹುದೆ ? ನೀಡದಿದ್ದಲ್ಲಿ ಶತಮಾನಗಳಿಂದ ವ್ಯಾಪಾರದಲ್ಲಿ ತೊಡಗಿರುವ ಭಾರತೀಯರ ಪರಿಸ್ಥಿತಿ ಏನೆಂಬುದು :

ಹಾಂಗ್‌ಕಾಂಗ್‌ನಲ್ಲಿ ನೆಲೆಸಿದ ಭಾರತೀಯರಲ್ಲಿ ಹೆಚ್ಚಿನವರು ಶತಮಾನಗಳ ಹಿಂದೆಯೇ ಹೋಗಿ ನೆಲೆಸಿದವರು. ಮೊದಲಿಗೆ ಅಂದರೆ 1840ರಲ್ಲಿ ಕೆಲವು ಪಾರ್ಸಿಗಳು ನೆಲೆಸಿದರೆ ಅವರನ್ನು ಅನುಸರಿಸಿ, ಸಿಖ್ಖರು, ಸಿಂಧಿಗಳು, ತಮಿಳರು, ಮಲಯಾಳಿಗಳು, ಮರಾಠಿಗಳು, ಮುಂತಾದವರು ಹೋಗಿ ನೆಲೆಸಿ ಅಗರ್ಭ ಶ್ರೀಮಂತರಾಗಿ ಮೆರೆಯುತ್ತಿದ್ದಾರೆ. ಅವರ ಬಗ್ಗೆ ನೋಡಿದಾಗ, ಕಳೆದ 20 ವರುಷಗಳಿಂದ ಅವರ ಆರ್ಥಿಕ ಬೆಳವಣಿಗೆ ಶೇಕಡ 7.5 ಮತ್ತು ಜೀವಿತ ಅವಧಿ ಸರಾಸರಿ 80 ವರುಷಗಳಾಗಿವೆ. ಅವರ ತಲಾ ಆದಾಯ 1996ರಲ್ಲಿ 25,300 ಡಾಲರ್‌ಗಳು ಹಾಗೆಯೇ ಪ್ರತಿಯೊಬ್ಬ ಪ್ರಜೆಯು ತಲಾ ಒಂದು ರೊಲ್ಸ್ ರಾಯಿಸ್ (Rolls Royees) ಕಾರುಗಳನ್ನು ಮತ್ತು ಸೆಲ್ಯುಲರ್ (Cellular Phone) ಫೋನ್‌ಗಳನ್ನು ಹೊಂದಿದ್ದಾರೆ.

ವಿಲೀನದ ಸಂದರ್ಭದಲ್ಲಿ ಇಂಗ್ಲೆಂಡಿನೊಂದಿಗೆ ಚೀನ ಮಾಡಿಕೊಂಡ ಒಪ್ಪಂದದ ಪ್ರಕಾರ, ಚೀನವು "ಒಂದು ರಾಷ್ಟ್ರ ಎರಡು ವ್ಯವಸ್ಥೆ" (One Cuntry two System) ಯನ್ನು ಮುಂದುವರಿಸುವ ಮತ್ತು ಹಾಂಗ್‌ಕಾಂಗ್‌ನ್ನು ವಿಶೇಷ ಆಡಳಿತ ವ್ಯವಸ್ಥೆಯ ಪ್ರಾಂತ್ಯವನ್ನಾಗಿ (Special Administrative Region) ಮಾಡಿ 50 ವರುಷಗಿಂತ ಹೆಚ್ಚಿನ ಕಾಲ ಮುಂದುವರೆಸುವ ಭರವಸೆಯನ್ನು ನೀಡಿದೆ. ಹಾಗೆಯೇ, ಅಲ್ಲಿಯ ಹಣವನ್ನು (Currency) ಸ್ಥಳೀಯ ಸರ್ಕಾರವನ್ನು ಮತ್ತು ಆಡಳಿತ ಭಾಷೆ (ಇಂಗ್ಲೀಷ್) ಯನ್ನು ಮುಂದುವರಿಸುವ ನಿರ್ಧಾರ ಮಾಡಿದೆ. ಹೀಗಿದ್ದರೂ ಕೂಡ ಅಲ್ಲಿ ನೆಲೆಸಿರುವ ಸುಮಾರು 22,000 ಭಾರತೀಯ ಕುಟುಂಬಗಳು (ಹಾಂಗ್‌ನಲ್ಲಿ ನೆಲೆಸಿರುವ ಭಾರತೀಯರ ಸಂಖ್ಯೆ ಆಸ್ಟ್ರೇಲಿಯಾದ ಜನ ಸಂಖ್ಯೆಗೆ ಸಮ)ಚಿಂತೆಗೆ ಒಳಗಾಗಿವೆ. ಅದರಲ್ಲೂ ಮುಖ್ಯವಾಗಿ ಮಧ್ಯಮ ವರ್ಗದವರು ತಳಮಳಗೊಂಡಿದ್ದಾರೆ. ಶ್ರೀಮಂತ ಭಾರತೀಯರು ತಮ್ಮ ವ್ಯಾಪಾರ ವಹಿವಾಟುಗಳನ್ನು ಹಾಂಗ್ ಕಾಂಗ್‌ಗೆ ಮಾತ್ರ ಸೀಮಿತ ಗೊಳಿಸಿಕೊಳ್ಳದೆ, ವಿಶ್ವದ ಇತರ ದೇಶಗಳಾದ ಕೆನಡ, ಅಮೇರಿಕ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ವಿಸ್ತರಿಸಿಕೊಂಡಿದ್ದಾರೆ. ಒಂದು ವೇಳೆ ಚೀನ ಅವರನ್ನು ಹೊರ ಹಾಕಿದರೆ ಇತರ ದೇಶಗಳಲ್ಲಿ ತಮ್ಮ ವ್ಯಾಪಾರವನ್ನು ಮುಂದುವರಿಸುವ ನಂಬಿಕೆಯಲ್ಲಿ ಇದ್ದಾರೆ.

ಆದರೆ ಮಧ್ಯಮ ವರ್ಗದವರಲ್ಲಿ ಹೆಚ್ಚಿನವರು ಸರಕಾರಿ ಸೇವೆಯಲ್ಲಿ, ಬ್ಯಾಂಕ್‌ಗಳಲ್ಲಿ ಆರೋಗ್ಯ ಕ್ಷೇತ್ರಗಳಲ್ಲಿ ಇದ್ದು ಮುಂದೆ ಚೀನದ ಅಧಿಕಾರಿಗಳು ಆ ಕ್ಷೇತ್ರವನ್ನು ಆಕ್ರಮಿಸಿಕೊಳ್ಳುವ ಭಯದಲ್ಲಿ ಇದ್ದಾರೆ. ಮಿಗಿಲಾಗಿ ಅಲ್ಲಿರುವ ಹೆಚ್ಚಿನ ಭಾರತೀಯರು ಯಾವ ದೇಶದ ಪೌರತ್ವವನ್ನು ಹೊಂದಿರದೆ (ಭಾರತ, ಚೀನ, ಇಂಗ್ಲೆಂಡ್) ರಾಜ್ಯ ರಹಿತ (Stath less Citizens) ಪೌರರಾಗಿದ್ದಾರೆ. ವಿಲೀನಕ್ಕೆ

● ಕುಯ್ಯಮುಡಿ ಅಶ್ವಿನಿಕುಮಾರ್

ಮೊದಲು ಅವರಿಗೆ ಇಂಗ್ಲೆಂಡ್ ದೇಶ ಪೌರತ್ವ ನೀಡಲು ನಿರಾಕರಿಸಿದೆ. ಈಗ ಚೀನ ಹಿಂದೇಟು ಹಾಕುತ್ತಿದೆ. ತಮ್ಮ ಪೂರ್ವಜರ ನೆಪದಲ್ಲಿ ಮಾತ್ರ ಭಾರತದ ಪೌರತ್ವವನ್ನು ಪಡೆದುಕೊಳ್ಳಬಹುದಾದರೂ ಅವರಿಗೆ ಕಾನೂನಿನ ಚೌಕಟ್ಟನಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಭಾರತದ ಪೌರತ್ವ ಪಡೆದುಕೊಳ್ಳಲು ಕಷ್ಟವಾಗಬಹುದು. ಒಂದು ವೇಳೆ ಚೀನ ದೇಶ 1997ರ ಜೂನ್ ಒಪ್ಪಂದದಂತೆ ನಡೆದುಕೊಳ್ಳದಿದ್ದಲ್ಲಿ ಭಾರತೀಯರು ಈ ಹಿಂದೆ ಕೀನ್ಯ, ಉಗಾಂಡ ಸಾಂಗಾಯ್‌ಗಳಲ್ಲಿ ಅನುಭವಿಸಿದ ನಷ್ಟ ಕಷ್ಟಗಳನ್ನೆ ಅನುಭವಿಸಬಹುದು.

ನಾನು ಈ ರೀತಿ ಬರೆಯಲು ಮುಖ್ಯ ಕಾರಣ ಮಾವೊತ್ಸೆ ತುಂಗನ ನಾಯಕತ್ವದಲ್ಲಿ ಚೀನ ಸಾಂಗಾಯ್‌ಯನ್ನು ವಿಲೀನಗೊಳಿಸಿಕೊಂಡಾಗ ಅಲ್ಲಿ ನೆಲೆಸಿದ್ದ ಭಾರತೀಯ ವ್ಯಾಪಾರಸ್ಥರನ್ನು, ಪೋಲೀಸರನ್ನು ರೈತರನ್ನು ಹೊರಹಾಕಿದ ನಿದರ್ಶನವಿದೆ.

(ಮುಂದಿನ ಸಂಚಿಕೆ ನೋಡಿ)

ವೀಳ್ಯ ಶಾಸ್ತ್ರದ ಕ್ರಮ

ಶುಭ ದಿನದಂದು ಉಭಯಸ್ತರು ಕಾರ್ಯಕ್ರಮ ನಿಶ್ಚಯಿಸಿ ಕನ್ಯೆಯ ಮನೆಯಲ್ಲಿ ವೀಳ್ಯ ಶಾಸ್ತ್ರಕ್ಕೆ ಏರ್ಪಾಡು ಮಾಡುವರು. ಹುಡುಗಿಯ ಮನೆಯವರು ಬಂಧು-ಭಾಂದವರಿಗೆ ಊರಿನ ಗೌಡರಿಗೆ, ಮುಖ್ಯಸ್ಥರಿಗೆ ವೀಳ್ಯ ಕೊಟ್ಟು ಹೇಳಿ ಬರಬೇಕು. ಹುಡುಗನ ಕಡೆಯಿಂದಲೂ ಅವರ ಬಂಧು-ಭಾಂದವರಿಗೆ, ಊರಿನ ಗೌಡರಿಗೆ-ಮುಖ್ಯಸ್ಥರಿಗೆ ವೀಳ್ಯ ಕೊಟ್ಟು ವೀಳ್ಯ ಶಾಸ್ತ್ರಕ್ಕೆ ಬರುವುದಕ್ಕೆ ಹೇಳುವುದು.

ವೀಳ್ಯ ಶಾಸ್ತ್ರದ ದಿನ 5-7-9ರ ಮಿತಿಯಲ್ಲಿ ವೀಳ್ಯ ಶಾಸ್ತ್ರಕ್ಕೆ ಕನ್ಯೆಯ ಮನೆಗೆ ಹೋಗಲು ತೀರ್ಮಾನ ಮಾಡಿ ಅವರೆಲ್ಲರೂ ವರನ ಮನೆಗೆ ಬೆಳಿಗ್ಗೆ ಬಂದು ಸೇರಿ, ದೇವರ ದೀಪ ಹಚ್ಚಿ ನಾವು ಹೋಗುತ್ತಿರುವ ಕಾರ್ಯ ಶುಭವಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿ, ವೀಳ್ಯದೆಲೆ, ಅಡಿಕೆ, ಅಡಿಕೆಹೋಳು ಎಲ್ಲವನ್ನು ಒಂದು ಕೈ ಚೀಲದಲ್ಲಿ ತುಂಬಿ ನೆಂಟರಲ್ಲಿಗೆ ಕೊಡೆ ಕೋಲಾಗಿ ಹೋಗುವುದು. ಕನ್ಯೆಯ ಕಡೆಯವರು, ಕುಳಿತುಕೊಳ್ಳುವುದಕ್ಕೆ ಹಾಕಿದ ಚಾಪೆಯಲ್ಲಿಯೇ ಕುಳಿತುಕೊಳ್ಳುವುದಕ್ಕೆ ಹಾಕಿದ ಚಾಪೆಯಲ್ಲಿಯೇ ಕುಳಿತುಕೊಳ್ಳುವುದು. ಆಗ ಹುಡುಗಿಯ ಕಡೆಯವರು ಬಂದ ನೆಂಟರ ಕೊಡೆ ಕೋಲು ಕೈಚೀಲ ತೆಗೆದಿಡುವುದಕ್ಕೆ ಕೇಳುವರು. ಕೊಡೆ ಕೋಲನ್ನು ಮಾತ್ರ ಕೊಟ್ಟು ಕೈ ಚೀಲವನ್ನು ತಮ್ಮ ಬಳಿಯೇ ಜೋಪಾನವಾಗಿ ಇಟ್ಟುಕೊಳ್ಳುವುದು. ಹುಡುಗಿಯ ಕಡೆಯವರು ಅಲ್ಲಿ ನೆರೆದವರ ಪರಿಚಯ ಮಾಡಿಕೊಡುವರು. ಆಗ ಕಿರಿಯರು ಹಿರಿಯರ ಪಾದ ಮುಟ್ಟಿ ನಮಸ್ಕರಿಸುವುದರೊಂದಿಗೆ ಪರಿಚಯ ಮಾಡಿಕೊಳ್ಳುವುದು.

ನಂತರ ಶುಭ ಮುಹೂರ್ತವಿದ್ದಂತೆ ನಿಶ್ಚಯಿಸಿದ ಸಮಯಕ್ಕೆ ಸರಿಯಾದ ಕನ್ಯೆಯ ಭಾಗದ ಮುಖ್ಯಸ್ಥರು ಮನೆಯ ದೇವರ ದೀಪ ಹಚ್ಚುವ (ನೆಲ್ಲಕ್ಕಿ) ಕೋಣೆಯ ಇದಿರು ಭಾಗದಲ್ಲಿ 4 ಚಾಪೆ ಹಾಕಿ, ಅದರ ಮೇಲೆ ಎರಡು ಮಣೆ ಇಟ್ಟು, ಒಂದು ಮಣೆಯ ಮೇಲೆ ನಂದಾ ದೀಪ ಹಚ್ಚಿಟ್ಟು ಅದರ ಪಕ್ಕದಲ್ಲಿ ಕಂಚಿನ ಬಟ್ಟಲಲ್ಲಿ 5 ಎಲೆ ಒಂದು ಅಡಿಕೆ ಸ್ವಲ್ಪ ಬೆಳ್ತಿಗೆ ಅಕ್ಕಿ ಹಾಕುವರು. ಊದುಕಡ್ಡಿ ಹಚ್ಚಿ ಇಡುವರು. ಆಮೇಲೆ ಒಂದು ಚೆಂಬು ನೀರು ಸಭೆಗೆ ಕೊಟ್ಟು, ವೀಳ್ಯ ಶಾಸ್ತ್ರದ ಕ್ರಮಕ್ಕೆ ಸಿದ್ಧವಾಗಿದೆ. ಊರವರು ನೆಂಟರೂ ಸರ್ವರೂ ಶುಭ ಕಾರ್ಯವನ್ನು ಸಾಂಗವಾಗಿ ನೆರವೇರಿಸಿಕೊಡಿರೆಂದು ಮನೆಯ ಯಜಮಾನರು ಕೇಳಿಕೊಳ್ಳುವರು.

ಅನಂತರ ಹುಡುಗನ ಕಡೆಯಿಂದ ಕಚ್ಚೆ ಪಂಚೆ ಹಾಕಿ ಬಿಳಿ ಶರಟು ಹಾಕಿ ಜರಿ ಪೇಟ ಕಟ್ಟಿ ಹೆಗಲಿಗೆ ಶಾಲು ಹಾಕಿಕೊಂಡು ಮುಂದಾಗಿಯೂ ಉಳಿದವರು ಜೊತೆಯಲ್ಲಿ ವೀಳ್ಯದೆಲೆ ಅಡಿಕೆ ಚೀಲ ಹಿಡಿದುಕೊಂಡು ಹಿಂದಿನಿಂದ ಬಂದು ಕೈಯಾಲೆ (ಚೌಕಿ) ಯ ಮುಂಭಾಗದಲ್ಲಿ ನಿಲ್ಲುವರು. ಅದೇ ಸಮಯದಲ್ಲಿ ವಧುವಿನ ಕಡೆಯ ಮುಖ್ಯಸ್ಥರು ಮೇಲೆ ಹೇಳಿದ ರೀತಿಯ ಪೋಷಾಕು ಧರಿಸಿ ಚೌಕಿಯಲ್ಲಿ ಇನ್ನಿಬ್ಬರು ಗೃಹಸ್ಥರೊಂದಿಗೆ ಮನೆಯ ಪೂರ್ವಾಭಿಮುಖವಾಗಿ ಚಾಪೆ ಹಾಕಿ ನಂದಾ ದೀಪವನ್ನು ಉರಿಸಿಟ್ಟ ಸ್ಥಳದಲ್ಲಿ ಕುಳಿತುಕೊಳ್ಳುವರು. ಹುಡುಗನ ಕಡೆಯವರು ಚೌಕಿಯ ಮುಂಭಾಗ ಬಂದು ನಿಂತು ಚೌಕಿಯಲ್ಲಿ ಕುಳಿತ ಗೃಹಸ್ಥರಿಗೆ ನಮಸ್ಕಾರ ಹೇಳಿ ನಂತರ ಅವರು ಬಂದ ಜಿಲ್ಲೆ, ತಾಲ್ಲೂಕು, ನಾಡು, ಗ್ರಾಮ ಮತ್ತು...ಇಂತಹವರ ಅನುಮತಿ ಮೇರೆ (...ಇರುವಲ್ಲಿ ಹುಡುಗನ ಮನೆ ಯಜಮಾನರ ಹೆಸರು ಹೇಳುವುದು...ಇಲ್ಲಿ ಕನ್ಯೆಯ ಕಡೆಯ ಪೂರ್ಣ ವಿವರ ಮತ್ತು ಮನೆ ಯಜಮಾನರ ಹೆಸರು ಹೇಳಿ) ಅವರ ಮನೆಗೆ ವೀಳ್ಯ ಶಾಸ್ತ್ರ ನಡೆಸುವುದಕ್ಕೆ ಬಂದ ನೆಂಟರು ನಾವು ಎಂದು ಅವರವರ ಗ್ರಾಮಕ್ಕೆ ಸಂಬಂಧಪಟ್ಟಂತೆ ಹೇಳುವುದು. ಆಮೇಲೆ ಚೌಕಿಯಲ್ಲಿ ಕುಳಿತುಕೊಳ್ಳಲು ಅನುವು ಕೊಡಬೇಕೆಂದು ಕೇಳಿ, ಅನುವು ಆದ ಮೇಲೆ ಕುಳಿತುಕೊಂಡು, ಒಂದು ತಟ್ಟೆಯಲ್ಲಿ ವೀಳ್ಯ ಬಳಸಿ ನಾವು ಬಂದ ಕಾರ್ಯವನ್ನು ಯಾವುದೇ ಕಾರಣಕ್ಕೂ ತೊಂದರೆ ಬಾರದಂತೆ ನೆರವೇರಿಸಿ ಕೊಡಬೇಕೆಂದು ವೀಳ್ಯದ ತಟ್ಟೆಯನ್ನು ನೀರು ಮುಟ್ಟಿ ಚೌಕಿಯಲ್ಲಿ ಕುಳಿತು ಮುಖ್ಯಸ್ಥರು ಹಸ್ತ ಕೊಡಬೇಕು. ಕನ್ಯೆಯ ಕಡೆಯ ಮುಖ್ಯಸ್ಥರು ವೀಳ್ಯ ತೆಗೆದುಕೊಂಡು ಕನ್ಯೆಯ ತಂದೆ, ತಾಯಿಯವರಲ್ಲಿ ಸರ್ವರಲ್ಲಿ ನಾವು ವೀಳ್ಯ ಕಟ್ಟಿಸಿಕೊಳ್ಳುತ್ತಿದ್ದೇವೆ. ನಿಮ್ಮ ಒಪ್ಪಿಗೆ ಇದೆಯೇ ಎಂದು ಕೇಳುವ ಪದ್ಧತಿ ಇದೆ. ಬಂದ ನೆಂಟರು ಚೌಕಿಯಲ್ಲಿ ಕುಳಿತುಕೊಳ್ಳಲು ಅನುವು ಕೇಳಿ ಅನುವು ಪಡೆದ ನಂತರ ಚೆಂಬಿನಲ್ಲಿ ಇಟ್ಟಿದ್ದ ನೀರನ್ನು ಮುಟ್ಟಿ ಎದುರು ಭಾಗಕ್ಕೆ ಎಲ್ಲಾ ವೀಳ್ಯದ ತುದಿಯು ಇರುವಂತೆ 5 ಎಲೆ ಒಂದು ಅಡಿಕೆ ಹಿತ್ತಾಳೆಯ ಹರಿವಾಣಕ್ಕೂ ಬಳಸಿ ನೀರು ಮುಟ್ಟಿ ಎದ್ದು ನಿಂತು ಪದ್ಧತಿ ಪ್ರಕಾರ "ಹತ್ತು ಕುಟುಂಬ ಹದಿನೆಂಟು ಗೋತ್ರ ಬಂಧು ಬಾಂಧವರು ನೆಂಟರು

ಕೃಪೆ :
-ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಇಷ್ಟರು ಸರ್ವ ಸ್ವಜಾತಿ ಗೃಹಸ್ಥರಲ್ಲಿ ಕುಲಸ್ಥರ ಸಭೆಯಲ್ಲಿ ಸಮಸ್ತರ ಸಂಗಡ ಕೇಳಿ ನೆಲ್ಲಕ್ಕಿ ದೀವಿಗೆ ಅಡಿಯಲ್ಲಿ ವರನ ಗೋತ್ರ ಹೆಸರು ವಿವರ ಹೇಳಿ ವಧುವಿನ ಗೋತ್ರ ವಿವರ ಹೇಳಿ.

1. "ಶಾಲಾವಳಿ ವೀಳ್ಯಕಟ್ಟುವಂತವೆ" ಎಂದು ಹೇಳಿ ವೀಳ್ಯದ ತಟ್ಟೆಯನ್ನು ವರನ ಕಡೆಯ ಮುಖ್ಯಸ್ಥರು ವಧುವಿನ ಕಡೆಯ ಮುಖ್ಯಸ್ಥರ ಕೈಗೆ ಕೊಡುವುದು. (ಇಲ್ಲಿ ಹತ್ತು ಕುಟುಂಬ ಹದಿನೆಂಟು ಗೋತ್ರ ಒಕ್ಕಣೆಯನ್ನು ಮೂರು ಬಾರಿ ಹೇಳುವುದು). ಆಗ ಸಭೆಯ ಸರ್ವರೂ ಒಳ್ಳೆಯ ಕಾರ್ಯವಂತೇವೆ ಎಂದು ಒಕ್ಕೊರಲಿನಿಂದ ಶುಭ ಹಾರೈಸುವರು. (ವೀಳ್ಯ ಬಳಸುವಾಗ ಮೂರು ಮೂರು ಬಾರಿ ಅಡಿಕೆ ಮತ್ತು ವೀಳ್ಯವನ್ನು ಬಳಸುವುದು) ಪ್ರತಿ ವೀಳ್ಯ ಕಟ್ಟುವಾಗಲೂ ಹತ್ತು ಕುಟುಂಬ ಹದಿನೆಂಟು ಗೋತ್ರದ ಒಕ್ಕಣೆ ಹೇಳಿ ವೀಳ್ಯ ಕಟ್ಟುವುದು.

2. 7 ಕವಳೆ ವೀಳ್ಯ 7ಅಡಿಕೆ ಮಾತು ಕರಾರು ವೀಳ್ಯ ಕೊಡುವರು.

3. 9 ಕವಳೆ ವೀಳ್ಯ 9 ಅಡಿಕೆ ಬಳಸಿ ವೀಳ್ಯ ಶಾಸ್ತ್ರದ ವೀಳ್ಯ ಕೊಡುವರು.

4. 5 ಕವಳೆ ವೀಳ್ಯ 5 ಅಡಿಕೆ ಬಳಸಿ ಲಗ್ನ ಕುದಿ ವೀಳ್ಯ ಕೊಡುವರು.

5. 7 ಕವಳೆ ವೀಳ್ಯ 7 ಅಡಿಕೆ ಬಳಸಿ ಬಣ್ಣ ಬಂಗಾರದ ವೀಳ್ಯವನ್ನು ಕೊಡುವರು. ಬಣ್ಣ ಬಂಗಾರದ ವೀಳ್ಯವನ್ನು ಕೊಡುವುದಕ್ಕೆ ಮುಂಚಿತವಾಗಿ ವಧುವಿಗೆ ಬೇಕಾದ ಚಿನ್ನಾಭರಣಗಳ, ಬಟ್ಟೆಗಳ ವಿವರ ಹೇಳುವ ಪದ್ಧತಿ, ವಧುವಿನ ಕಡೆಯ ಗೃಹಸ್ಥರಿಗಿದೆ ಮತ್ತು ಬೇಕಾದ ಬಟ್ಟೆ ಬರೆ ಆಭರಣಗಳನ್ನು ವಿವರಿಸುವುದಾಗಿದೆ.

6. 9 ಕವಳೆ ವೀಳ್ಯ 9 ಅಡಿಕೆ ಬಳಸಿ ಗುರುವೀಳ್ಯವನ್ನು ಕೊಟ್ಟು ಇನ್ನುಳಿದ 3 ವೀಳ್ಯವಾದ

1. ತಂದೆ ವೀಳ್ಯ, 2. ತಾಯಿ ವೀಳ್ಯ 3. ಮಹಾನಾಡು ವೀಳ್ಯವನ್ನು ದಿಬ್ಬಣ ಹೋಗಿ ಬಣ್ಣ ಬಂಗಾರವನ್ನಿಡುವ ಸಮಯದಲ್ಲಿ ಕಟ್ಟುವುದಾಗಿದೆ. (ಸೂಚನೆ : ಕೆಲವು ಕಡೆಗಳಲ್ಲಿ 12 ವೀಳ್ಯವನ್ನು ಕಟ್ಟುವರು. ಕೊಡಗು ಗೌಡ ವಿದ್ಯಾ ಸಂಘವು 9ವೀಳ್ಯಗಳಿಗೆ ಸೀಮಿತಗೊಳಿಸಿದೆ). ಇನ್ನೂ ಕೆಲ ಕಡೆ ಕಟ್ಟುವ ವಾಕ್ಯದ 12 ವಿಧಗಳು.

1. ಹೆಣ್ಣು ಮಾತಿನ ವೀಳ್ಯ, 2. ಸಲಾವಳಿ ವೀಳ್ಯ, 3. ಹೆಣ್ಣು ಮಾತಿನ ಕರಾರು ವೀಳ್ಯ 4. ಲಗ್ನ ಕುದಿ ವೀಳ್ಯ. 5. ದೇವರ ವೀಳ್ಯ (ಇದಕ್ಕೆ ಎಲೆಕವಳಿಗೆ ಐದರ ಸೂಡಿ ಒಂದು, ಅಡಿಕೆ ಐದು). 6. ಗುರು ವೀಳ್ಯ (ಎಲೆ ಕವಳಿಗೆ ಐದರ ಸೂಡಿ ಒಂದು, ಅಡಿಕೆ ಐದು. 7. ಬಾಂಧವರ ವೀಳ್ಯ (ಎಲೆ ಕವಳಿಗೆ ಐದರ ಸೂಡಿ ಒಂದು, ಅಡಿಕೆ ಐದು). 8. ತಂದೆ ವೀಳ್ಯ 9. ತಾಯಿ ವೀಳ್ಯ. (ಎಲೆ ಕವಳಿಗೆ ನಾಲ್ಕರ ಸೂಡಿ ಒಂದು ಅಡಿಕೆ ಐದು). 10. ಅಚ್ಚು-ಕಟ್ಟುವ ವೀಳ್ಯ (ಎಲೆ ಕವಳಿಗೆ ಐದರ ಸೂಡಿ ಒಂದು, ಅಡಿಕೆ ಐದು) ಮತ್ತು ಅಚ್ಚು ಕಟ್ಟುವ ರೂಪಾಯಿ ನಾಲ್ಕೂವರೆ ಸಹ ಸದ್ರಿ ವೀಳ್ಯದ ಮೇಲೆ ಇಟ್ಟು ಕೊಡುವುದು.) 11. ಬಣ್ಣ ಬಂಗಾರದ ವೀಳ್ಯ, (ಎಲೆ ಕವಳಿಗೆ ನಾಲ್ಕರ ಸೂಡಿ ಒಂದು, ಅಡಿಕೆ ಐದು.) 12. ತೆರವು ಮರವು ವೀಳ್ಯ, (ಎಲೆ ಕವಳಿಗೆ ನಾಲ್ಕರ ಸೂಡಿ ಒಂದು, ಅಡಿಕೆ ಐದು) ವೀಳ್ಯ ಶಾಸ್ತ್ರದ ಸಮಯದಲ್ಲಿ 5 ಎಲೆ 1 ಅಡಿಕೆ ಹುಡುಗನಿಗೂ ಹಾಗೂ ಹುಡುಗಿಗೂ ಕೊಡಬೇಕು. ಅದನ್ನು ಅವರು ಸೇವಿಸುವುದು. ಹಿರಿಯರಿಂದ ನಡೆದು ಬಂದ ಪದ್ಧತಿಯಾಗಿದೆ. ವೀಳ್ಯ ಶಾಸ್ತ್ರದ ದಿವಸ ವಧುವು ಸ್ನಾನಾದಿಗಳನ್ನು ಮುಗಿಸಿ ಮಡಿಯಾದ ಬಿಳಿ ಸೀರೆಯನ್ನು ಉಟ್ಟಿರಬೇಕು. ವೀಳ್ಯ ಶಾಸ್ತ್ರದ ನಂತರ ಹುಡುಗ (ವರ) ಅಥವಾ ಹುಡುಗಿ (ವಧು) ಸೋದರ ಮಾವನ ಮನೆಯನ್ನು ಬಿಟ್ಟು ಬೇರೆಲ್ಲಿಯೂ ಉಳಿಯಕೂಡದು, ಬೇರೆ ಯಾವುದೇ ಚಪ್ಪರದ ಮೇಲ್ಕಟ್ಟಡಿಗೆ ಪ್ರವೇಶಿಸಕೂಡದು. ಧಾರೆ ಕಾರ್ಯದ ಸಮಯದಲ್ಲಿ ವಧು-ವರರು ಒಬ್ಬರನೊಬ್ಬರು ಸಂಧಿಸಕೂಡದು. ವರನು ಎಣ್ಣೆ ಅರಸಿಣ ಮಾಡಿ ಮುಖ ಕ್ಷೌರ ಮಾಡುವಲ್ಲಿಯವರೆಗೆ ಮುಖಕ್ಷೌರ ಮಾಡಕೂಡದು ಎಂದು ಹಿರಿಯರ ಕಾಲದಿಂದಲೇ ನಡೆದು ಬಂದ ಪದ್ಧತಿಯಾಗಿದೆ.

ವೀಳ್ಯಶಾಸ್ತ್ರ ಆದ ಕೂಡಲೇ ಚಾಕಿಯಲ್ಲಿ ಕುಳಿತು ಲಗ್ನ ಪತ್ರಿಕೆ ಬರೆಯುತ್ತಾರೆ. ಇದರಲ್ಲಿ ಸಾಧಾರಣವಾಗಿ ಈ ಮನೆ ಸ್ಥಾನದಿಂದ ಇಂಥಾ ಮನೆ ಸ್ಥಾನಕ್ಕೆ ಇಂಥವರ ಅನುಮತಿ ಮೇರೆ ಇವರ ಮಗಳನ್ನು ಇಂಥವರ ಮಗನಿಗೆ ಕೊಡುವಂತೆ ಒಪ್ಪಿ ಬರೆದ ಕರಾರು ಪತ್ರವಾಗಿದೆ. ಇವಕ್ಕೆ ಲಗ್ನ ಪತ್ರಿಕೆ ಎಂದು ಹೇಳುವರು. ಇವರಲ್ಲಿ ಸಾಧಾರಣವಾಗಿ ಪೂರ್ಣ ವಿವರಗಳು ಇರುವವು.

ಕೆಲವು ಕಡೆ ಅದೇ ದಿನ ಬಂದ ನೆಂಟರು ಮತ್ತು ಊರಿನ ಮಹನೀಯರು ಸೇರಿ ಗುರು ಕಾರ್ಣವರಿಗೆ ಆಗಲು ಹಾಕುವ ಕ್ರಮವನ್ನು ಇಟ್ಟುಕೊಳ್ಳುವರು. ಆಗ ಪ್ರಾರ್ಥಿಸುವ ಕ್ರಮವೇನೆಂದರೆ "ನಾವು ಎಲ್ಲರೂ ಸೇರಿ ಈ ಒಂದು ಶುಭ ಕಾರ್ಯವನ್ನು ಎತ್ತಿ ಹಿಡಿದಿದ್ದೇವೆ. ಆದ್ದರಿಂದ ಈ ಕಾರ್ಯಕ್ಕೆ ಯಾವ ತೊಂದರೆಯೂ ಬಾರದಂತೆ ನಮ್ಮ ಗುರು ಕಾರ್ಣವರಿದ್ದು ನಮ್ಮ ಎಲ್ಲಾ ದೈವಗಳು ಸಂತೋಷಪಟ್ಟು ಇಟ್ಟ ಎಲೆಯಲ್ಲಾಗಲಿ ಬಳಸಿದ ಆಗಲಿನಲ್ಲಾಗಲಿ ತಪ್ಪುಗಳಿದ್ದರೆ ಒಪ್ಪು ಮಾಡಿಕೊಂಡು ಬರುವಂತ ಆ ಪುಣ್ಯ ಕೀರ್ತಿ ಸ್ವಾಮಿಗೆ ಕೂಡಿದ್ದು" ಎಂದು ಪ್ರಾರ್ಥಿಸಿ ದೀಪಕ್ಕೆ ಅಕ್ಕಿ ಹಾಕಿ ಕೈ ಮುಗಿಯುವರು. ವಧುವು ಹಿರಿಯರ ಪಾದ ಮುಟ್ಟಿ ನಮಸ್ಕಾರ ಮಾಡಿ ಆಶೀರ್ವಾದ ಪಡೆಯಬೇಕು.

ಆ ದಿನ ಬಂದ ನೆಂಟರು ಅಲ್ಲಿಯೇ ತಂಗಿ ಮರುದಿನ ಬೆಳಿಗ್ಗೆ ದೇವರ ದೀಪ ಹಚ್ಚಿ ನೆಲ್ಲಕ್ಕಿ ಅಡಿಯಲ್ಲಿ ಮೊದಲ ದಿನ ಬರೆದ ಲಗ್ನ ಪತ್ರಿಕೆಯನ್ನು ಎದುರು ಬದುರಾಗಿ ನಿಂತು ಬದಲಿಸುವುದು. ಲಗ್ನ ಪತ್ರಿಕೆಯನ್ನು ಬದಲಿಸುವ ಸಮಯದಲ್ಲಿ ವಧುವಿನ ಕುಟುಂಬದ ಹಿರಿಯರು (ಪಟ್ಟೆದಾರ) ನಮ್ಮ ಮನೆಯಿಂದ ಕೊಡುವ ಒಂದು ದೀವಿಗೆಯು ನಿಮ್ಮ ಮನೆಯಲ್ಲಿ ಜ್ಯೋತಿಯಂತೆ "ಪ್ರಕಾಶಿಸಲಿ" ಎಂಬುದಾಗಿ ಒಕ್ಕಣೆಯ ಮಾತನ್ನು ಕೇಳಿ ಕೊಡುವುದಾಗಿದೆ. ಇಲ್ಲಿಯು ವಧುವು ಹಿರಿಯರ ಆಶೀರ್ವಾದವನ್ನು ಬೇಡುವುದು.

(ವಿವಾಹಕ್ಕೆ ಹೇಳುವ ಕ್ರಮ)

ಮುಂದಿನ ಸಂಚಿಕೆಯಿಂದ

ಮರೆವು ಮತ್ತು ಜ್ಞಾಪಕ

ಮರೆವು ಮತ್ತು ಜ್ಞಾಪಕ ಎಂಬುದು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಜ್ಞಾಪಕವಾಗದಿರುವುದೇ ಮರೆವು ಹಾಗೂ ಮರೆಯದಿರುವುದೇ ಜ್ಞಾಪಕ. ಇವೆರಡೂ ಎಲ್ಲರಲ್ಲೂ ಇರುವುದಾದರೂ ಇರುವ ಪ್ರಮಾಣದಲ್ಲಿ ಸಾಕಷ್ಟು ವ್ಯತ್ಯಾಸಗಳಿರುತ್ತವೆ.

ಮರೆವು ಆದಷ್ಟು ಕಡಿಮೆ ಹಾಗೂ ಜ್ಞಾಪಕ ಆದಷ್ಟು ಜಾಸ್ತಿ ಇರಬೇಕೆಂಬುದು ಎಲ್ಲರ ಬಯಕೆ. ಹಾಗೆ ನೋಡಿದರೆ ನನಗೆ ಜ್ಞಾಪಕವು ಜಾಸ್ತೀನೇ ಇದೆ ಎನ್ನಬಹುದು. ಮೊನ್ನೆ ನನ್ನವಳು, ಸಂಜೆ ಹಿಂದಿರುಗುವಾಗ ಜೀರಿಗೆ ಮರೆಯದೆ ತನ್ನಿ ಅಂದಿದ್ದಳು. ನಾನು ಮರೆಯದೇ ತೆಗೆದುಕೊಂಡು ಹೋಗಿದ್ದು ಎಳ್ಳು. ನನ್ನನ್ನು ಹೊಗಳಿದ್ಳೂ ಹೊಗಳಿದ್ಳೆ. ವಸ್ತು ವ್ಯತ್ಯಾಸ ಆದರೇನಂತೆ ವಿಷಯ ಮರೆಯಲಿಲ್ಲವಲ್ಲವೆಂದು !

ಹಿಂದೊಮ್ಮೆ ಗೌಹಾಟಿಯ ಬೋರ್ಜಾರ್ ಸಮೀಪದ ವಾಯುಸೇನೆಯಲ್ಲಿದ್ದಾಗ ಘಟನೆ ಜ್ಞಾಪಕವಾಗುತ್ತದೆ. ಅಂದು ಬೆಳಗ್ಗೆ ಎಂದಿನಂತೆ ಆಫೀಸಿನಲ್ಲಿ ಕುಳಿತಿರುವಾಗ ಮೇಲಾಧಿಕಾರಿಗಳಿಂದ ಕರೆ ಬಂತು. ಅಲ್ಲಿಂದ ಎರಡು ಮೈಲು ದೂರದಲ್ಲಿರುವ ಇನ್ನೊಂದು ವಿಭಾಗದಲ್ಲಿ ಸೂಕ್ಷ್ಮ ಕೆಲಸವೊಂದರಲ್ಲಿ ಸಹಕರಿಸಲು ತಕ್ಷಣ ಹೋಗಬೇಕೆಂದು ತಿಳಿಸಿದರು. ಆಗೆಲ್ಲಾ ಸೈಕಲ್‌ಗಳದ್ದೇ ಸಾಮ್ರಾಜ್ಯ. ನನ್ನಲ್ಲೂ ಒಂದಿತ್ತು. ಅದರಲ್ಲಿ ಏರಿ ಹೋಗುವುದೆಂದು ಸೈಕಲ್ ಸ್ಟಾಂಡಿಗೆ ತಲುಪಿದೆ. ನಂತರ ಲಾಕ್ ಓಪನ್ ಮಾಡಬೇಕೆಂದರೆ ಕೀ ಎಲ್ಲಿದೆ ? ಪ್ಯಾಂಟಿನ ಮೂರು ಜೇಬುಗಳಲ್ಲಿ ತಡಕಾಡಿ ಆಯ್ತು, ಇಲ್ಲ. ಶರ್ಟಿನ ಎರಡು ಜೇಬುಗಳೂ ಅದೇ ಉತ್ತರ ನೀಡಿದವು. ಕೋಟಿನ ನಾಲ್ಕು ಜೇಬುಗಳು ಬೇರೇನನ್ನೋ ತೋರಿಸಿದ್ದಷ್ಟೇ ಹೊರತು ಕೀ ಬಗ್ಗೆ ಚಕಾರವೆತ್ತಲಿಲ್ಲ. ಕೊನೆಗೆ ಗೆಳೆಯನ ವಾಹನ ಕೇಳೋಣವೆಂದ್ರೆ ಅವರಂದು ರಜೆಯಲ್ಲಿರುವರೆಂದು ಜ್ಞಾಪಕ ಹೇಳಿತು. ತಡವಾಗುತ್ತಿದ್ದುದರಿಂದ ತಾಳ್ಮೆಯೂ ಕಡಿಮೆ ಆಗುತ್ತಿತ್ತು. ಹತ್ತಿರದಲ್ಲಿ ಕೊಡೆ ಕಡ್ಡಿಯಾಗಲೀ ಆಣಿಯಾಗಲೀ ಇಡೆಯಾ ಎಂದು ಕಣ್ಣುಗಳು ಅಗಸಿದವು. ಎಲ್ಲಾ ಕಡೆಯೂ ಸೋಲೇ. ಆಗ ಜ್ಞಾಪಕವಾದರು ದೇವರು. "ಓಹ್ ಮೈ ಗಾಡ್" "ಗಾಡ್" ಅಂತ ಉದ್ಗಾರವೆತ್ತಿದೊಡನೆ ಟಣ್ಣನೇ ಕೆಳಗೆ ಬಿತ್ತು ಕೀ, ನನ್ನ ಬಾಯಿಂದ. ಸ್ಟಾಂಡಿಗೆ ಹೋಗುವಾಗ ಜೇಬಿಂದ ತೆಗೆದು ಬಾಯಲ್ಲಿಟ್ಟುಕೊಂಡದ್ದು ಮರೆತೇ ಹೋಗಿತ್ತಾದರೂ ದೇವರ ಜ್ಞಾಪಕವಾದುದರಿಂದ ದೊರೆಯಿತು. ಹೇಗಿದೆ ನನ್ನ ಇವುಗಳ ಒಡನಾಟ ?

–ಎ. ಕೆ. ಚಂದ್ರಶೇಖರ ಭಟ್
ನಿವೃತ್ತ ಏರ್‌ಫೋರ್ಸ್, ಭಾಗಮಂಡಲ.

ಶಿಕ್ಷಕ

ಶಿಕ್ಷಕನಾದರು ವಿದ್ಯೆಗೆ ತಾನು ಜನುಮಧಾತನು
ಶಿಕ್ಷಕ ನಿಲ್ಲದೆ ವಿದ್ಯೆ ಯಾವುದು ಸಫಲವಾಗದು
ಮೂಲ ಶಿಕ್ಷಕ ಗುರುವನ್ನು ಯಾರು ಮರೆಯಲಾರರು ||ಶಿಕ್ಷಕನಾದರು||

ಶಾಲೆಗೆ ಬಂದೊಡೆ ಮನೆಯ ಚಿಂತೆಯ ದೂರವಿಡುವನು
ಮಕ್ಕಳ ಜೊತೆಯಲ್ಲಿ ಸರಸವಾಡುತ್ತಾ ಕಷ್ಟ ಮರೆವನು
ಮುದ್ದಿನ ಮಕ್ಕಳ ತೊದಲು ನುಡಿಗೆ ಮನ ಸೋತನು ||ಶಿಕ್ಷಕನಾದರು||

ಬಡವನೆ ಬರಲಿ ಬಲ್ಲಿದ ಬರಲಿ ಭೇದ ತೋರನು
ಜಾತಿ ಮತಗಳ ಎಣಿಸದೆ ತಾನು ಭೋದನೆ ಮಾಡ್ವನು
ಎಲ್ಲರೂ ಒಂದೇ ಎನ್ನುವುದ ಅರಿತು ಪಾಠ ಹೇಳ್ವನು ||ಶಿಕ್ಷಕನಾದರು||

ರೂಸೋ, ಮಹಾತ್ಮ ಗಾಂಧಿ, ರವೀಂದ್ರನಾಥರ ಜಾಡು ಹಿಡಿವನು
ಟಿಪ್ಪಣಿ ಬರದೆ ನಿತ್ಯವು ತಾನು ಶಾಲೆ ಸೇರುವನು
ಮಕ್ಕಳ ಪ್ರಗತಿಯ ನಿತ್ಯವು ಕಂಡು ಹೆಮ್ಮೆ ಪಡುವನು ||ಶಿಕ್ಷಕನಾದರು||

–ಕಡ್ಲೇರ ದೇವಯ್ಯ ಪ್ರೇಮಕುಮಾರ್
ಹೆಬ್ಬಾಳು, ಮೈಸೂರು

ನಿಮ್ಮ ಪತ್ರಗಳು

ರಾಮಬಾಣದಂತೆ ಗುರಿಮುಟ್ಟಲಿ

ಮಾನ್ಯರೆ,

ಕೊಡಗು ಸಂಗಾತಿಯು ಈಗ ತಾನೆ ಹೆಡೆ ಎತ್ತಿರುವುದನ್ನು ನೋಡಿ, ಓದಿ ತುಂಬಲಾರದ ಸಂತೋಷವಾಯಿತು. ಸಂಗಾತಿಯು ಅನೇಕಾನೇಕ ವಿಷಯಗಳನ್ನು ಸಂಗ್ರಹಿಸಿ ರಾಮ ಬಾಣದಂತೆ ಗುರಿ ಮುಟ್ಟುವಲ್ಲಿ ಜಯಶೀಲವಾಗಲಿ ಎಂದು ಶುಭ ಕೋರುವ.

ಕುದುಪಜೆ ಹೇಮರಾಜ್, ಮದೆನಾಡು

ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ......

ಮಾನ್ಯರೆ,

ಸಂಗಾತಿ ಪತ್ರಿಕೆಯಲ್ಲಿ ಓದಲು ವಿಷಯಗಳು, ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಇದೆ. ಪತ್ರಿಕೆಯಲ್ಲಿ ವಿಜ್ಞಾನದ ವಿಷಯ ಇನ್ನು ಸ್ವಲ್ಪ ಜಾಸ್ತಿಯಿದ್ದರೆ ಚೆನ್ನಾಗಿರುತ್ತದೆ.

ಪುದಿಯನೆರವನ ಅಪ್ಪಸ್ವಾಮಿ
ಬೆಂಗಳೂರು.

ಸದಾ ಅಮರವಾಗಲಿ

ಮಾನ್ಯರೆ,

ನಮ್ಮ ಗೌಡ ಜನಾಂಗವನ್ನು, ನಮ್ಮ ಸಂಸ್ಕೃತಿ ಹಾಗೂ ಅರೆ ಭಾಷೆಯನ್ನು ಸಾರಲು ಹುಟ್ಟಿರುವ ನನ್ನ ಗೆಳತಿ 'ಕೊಡಗು ಸಂಗಾತಿ'ಗೆ ಶುಭಾಶಯಗಳು. ಈ ಪತ್ರಿಕೆಯಿಂದ ನಮ್ಮ ಗೌಡ ಜನಾಂಗವು, ನಮ್ಮ ಭಾಷೆ ಹಾಗೂ ಸಂಸ್ಕೃತಿ ಎಲ್ಲಾ ಕಡೆ ಬೆಳಗಲಿ. ನನಗೆ ಗೌಡ ಜನಾಂಗದ ಮೇಲೆ ತುಂಬಾ ಅಭಿಮಾನವಿದೆ. ನಮ್ಮ ಜನಾಂಗದ ಏಳಿಗೆಗೆ ಶ್ರಮಿಸ ಬೇಕು ಎಂಬ ಬಯಕೆಯನ್ನು ಹೊಂದಿರುತ್ತೇನೆ.

ಏನೇ ಆಗಲಿ ನನ್ನ ಗೆಳತಿಯು ಹೆಚ್ಚೆಚ್ಚು ಜನಾಂಗೀಯ ವಿಷಯಗಳನ್ನು ಸಂಗ್ರಹಿಸಿ ಎಲ್ಲರ ಮನಗೆದ್ದು, ಸದಾ ಅಮರ ವಾಗಿರಲಿ ಎಂದು ಆಶಿಸುತ್ತೇನೆ.

ತುಮ್ಮಜ್ಜೀರ ಲತ ಉಲ್ಲಾಸ್
ಮೈಸೂರು.

ಪಸರಿಸುತ್ತಿದೆ

ಮಾನ್ಯರೆ,

"ಕೊಡಗು ಸಂಗಾತಿ" ಹೊಸ ಹೊತ್ತಿಗೆಯು ಕರ್ನಾಟಕ ನಾಡಿನಾದ್ಯಂತ ಪಸರಿಸುತ್ತಿದೆ. ಇದರಿಂದ ಕನ್ನಡ ನಾಡಿನಲ್ಲಿ ಗೌಡ ಜನಾಂಗದವರಿದ್ದಾರೆ. ಜೊತೆಗೆ ಅವರದ್ದೇ ಆದ ಸ್ವಂತ ಭಾಷೆಯಿದೆ ಎಂಬುದನ್ನು ಜನಸಾಮಾನ್ಯರಿಗೆ ತಿಳಿಸುವಲ್ಲಿ ಯಶಸ್ವಿಯಾಗುತ್ತಿದೆ.

ಪ್ರಭಾಕರ್ ಕೆ. ಆರ್.
ತಣ್ಣಿಮಾನಿ

ಶ್ಲಾಘನೀಯ

ಮಾನ್ಯರೆ,

ಕನ್ನಡ ಭಾಷೆ ಹಾಗೂ ಗೌಡ ಜನಾಂಗದ ಅರೆಭಾಷೆ ಯಲ್ಲಿ ಪಾಕ್ಷಿಕ ಪತ್ರಿಕೆಯನ್ನು ಆರಂಭಿಸಿರುವ ತಮ್ಮ ಕಾರ್ಯ ಶ್ಲಾಘನೀಯವಾದುದು. ಈ ಪತ್ರಿಕೆ ಚಿರಾಯುವಾಗಲಿ ಹಾಗೂ ಶ್ರೇಷ್ಠಮಟ್ಟದ್ದಾಗಲಿ ಎಂದು ಹಾರೈಸುತ್ತೇನೆ.

ಸುಜೋತಿ ಅಣ್ಣಾಜ್ಜಿರ
ಕೊಳಗದಾಳು

ಕೊಡುಗೆ

ಮಾನ್ಯರೆ,

ಕೊಡಗು ಗೌಡರಿಗಾಗಿ ಹೊರ ಹೊಮ್ಮುತ್ತಿರುವ ನಿಮ್ಮ ಪತ್ರಿಕೆಯನ್ನು 1997ನೇ ವರ್ಷದ ಕೊಡುಗೆಯೆಂದು ಭಾವಿಸಿರುವೆನು. ಕೊಡಗು ಸಂಗಾತಿಯು ಪ್ರತಿಯೊಬ್ಬರ ಸಂಗಾತಿ ಯಾಗಲೆಂದು ಶ್ರೀ ವೆಂಕಟ್ರಮಣ ಕುಲದೇವರಲ್ಲಿ ಬೇಡುತ್ತೇನೆ.

ಕೈಬಿಲಿರ ಟಿ. ಮನೋಹರ
ಇಂಜಿನಿಯರ್, ಬೆಂಗಳೂರು.

ಮಾಧ್ಯಮವಾಗಿ ಬೆಳೆಯಲಿ

ಮಾನ್ಯರೆ,

ಇತ್ತೀಚೆಗಷ್ಟೇ ಹೊರ ಬಂದಿರುವ ಕೊಡಗು ಸಂಗಾತಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಜನಾಂಗದ ಹಲವಾರು ಮನೆ ತಲುಪುತ್ತಿದ್ದು, ಮುಂದೆ ಪ್ರತಿಯೊಂದು ಮನೆ ಮನೆಯ ಅಚ್ಚುಮೆಚ್ಚಿನ ಪತ್ರಿಕೆಯಾಗಿ ನಮಗಳಿಗೆ ಪರಸ್ಪರ ಪರಿಚಯ ಪ್ರೀತಿ, ವಿಶ್ವಾಸ ಸಹಾಯಕ್ಕೆ ತಕ್ಕ ಮಾಧ್ಯಮ ವಾಗಿಬೆಳೆದು ಬೆಳಗಲಿ ಎಂದು ಹಾರೈಸುವೆ.

ಹೊಸೂರು ಗಣಪತಿ ಸೀತಾರಾಮ
ಮೈಸೂರು.

ಅರೆಭಾಷಿಕ ವಿಭಾಗ

ಹಾಕ್ ಮಣೆ, ನೂಕ್ ಮಣೆ, ತೋರ್ ಮಣೆ !

ನಂಟ ನಂಟನಾಗಿಯೇ ಇರೋಕು. ಮನೆಯವನಂಗೆ ಆ ಕಾಗದ್. ಯಾಕೇಂತ ಗೊತ್ತುಟಾ ? ಮನೆಯವಂಗೆ ಅವನ ಮನೇಲಿ ಬೆಲೆ ಉಟ್ಟಾ ? ಅದ್ಕೇ ಹೇಳ್ದು ನಂಟನ ಬೆಲೆ ಉಳಿಯೊಕಾ ಅಂವ ನಂಟ ನಂಗೇ ಇರೋಕು. ಒಂದು ವರ್ಷಕ್ಕೋ ಎರಡ್ ವರ್ಷಕ್ಕೋ ಒಮ್ಮೆ ನಂಟನಾಗಿ ಹೋದರೆ ಅದ್ಕೆ ಬೆಲೆ ಉಟ್ಟು. ಅದ್ ಬುಟ್ ಆಗಾಗ ನಂಟನಾಗಿ ಹೋಗ್ತಾ ಇದ್ದರೆ ಅವಂಗೆ ಮರ್ಯಾದೆ ಸಿಕ್ಕುದುಲೆ. ಆವಂಗೆ ಸಿಕ್ಕುವ ಉಪಚಾರ ಸರಿಯಾಗಿ ದರ್ುಲೆ.

ಅಪರೂಪಕ್ಕೊಮ್ಮೆ ಬರುವ ನಂಟಂಗೆ ನೀವ್ ಮಾಡುವ ಉಪಚಾರದ ಸಣ್ಣ ಸ್ಯಾಂಪಲ್ ಇಲ್ಲಿಟ್ಟು. "ಅಣ್ಣಾ ನಿತ್ ಕಂಡೇ ಒಳರಿ. ಕುದ್‌ಕಣೇಂತೇಳಿರೆ. ಅಂವ ಕುದ್ದಲ್ಲೇ ಇದ್ದರೆ ನೀವ್‌ಗೆ ಕುದ್ ಕುದ್ ಬೇಜಾರಾತಾ ಅಂತ ಕೇಳಿರೆ. ಅಂವ ಮಲಗಿತೋ ನಿದ್ದೆ ಬಾತಾಂತ ಕೇಳಿರೆ. ನಿದ್ದೆಂದ ಎದ್ದತೋ ಬನ್ನಿ ಬಿಸಿ ನೀರುಟ್ಟು ಮೊಕ ತೊಳೇನಿ, ಕೈಕಾಲ್ ತೊಳೇನಿಂತ ಹೇಳಿ ಅಲ್ಲಿಗೇ ಟವಲ್ ಸಮೇತ ಹೋಗಿ ಕೈ ಹಿಡ್ಕಂಡೇ ಒಳಗೆ ಕರ್ಕಂಡ್ ಬಂದರೆ. ಊಟಕ್ಕೆ ಕುರ್ಚಿ ಹಾಕಿ ಕೂರಿಕೆ ಹೇಳಿರೆ. ಊಟಲಿ ಒಳ್ಳೊಳ್ಳ ಪೀಸ್‌ನೇ ನೋಡಿ ನೋಡಿ ಹಾಕಿರೆ. ಅಂವ ಬೇಡ ಬೇಡಾಂತ ಹೇಳಿರೂ ತಿನ್ನಿ ಅಣ್ಣಾ, ತಿನ್ನಿ ಭಾವಾಂತ ಹೇಳಿರೆ. ನಾಚಿಕೆ ಮಾಡ್‌ಬೇಡಿ. ನಿಮ್ಮ ಮನೇಂತನೇ ತಿಳ್ಕಣೇಂತ ಮೂಗುಲಿ ಬಾಯುಲಿ ತಿನ್ಸಿರೆ. ತಿಂದೆಲ್ಲಾ ಆತ್. ಕೈ ತೊಳ್ದೂ ಆತ್. ತಕ್ಕಣಯಪ್ಪಾ ಹಣ್–ತಿನ್ನಿಯಪ್ಪಾಂತ ರಾಗ ಎಳ್ದರೆ. ಮತ್ತೆ ಎಲೆ ಅಡಿಕೆ ಹಾಕಣೇಂತ ಹೇಳಿ ಅದನ್ನೂ ಕೊಟ್ಟರೆ. ಅಣ್ಣಾ ನೀವ್‌ಗೆ ಉಬ್ಬಸಾದರೆ ಹಜಾ ಮಲ್ಕಣೇಂತ ಹೇಳಿರೆ. ಜೋಸ್ ಪಾರ್ಟಿ ಯಾದರೆ ತಬ್ಬಿ ಹಿಡ್ಕಂಡ್ ಹಾಸಿಗೆ ಮೇಲೆ ಹೊತ್ ಹಾಕಿರೆ. ಬೇಡಾ ಬೇಡಾಂ ತೇಳಿ ಪುರ್‌ಕ ಏರ್ಸಿಬುಟ್ರೊ. ಈಗ ಟೈಟ್ ಆಗಿ ಬುಟ್ರೋಂತ ನೀವ್ ಕಸಿವಿಸಿ ಮಾಡಿ ಕಂಡ್ರೆ.

ಮಾರನೆಗೆ ನಂಟ ಎದ್ದರೆ ಅವನ ಹಿಂದೆ ನೀವ್ ಓಡಾಡಿಕಂಡೇ ಇದ್ದರೆ. ಹಲ್ಲುಜ್ಜಿಕೆ ಪೇಸ್ಟ್ ಮುಖಕೆ ಗಮ್‌ಗಮಾ ಸಾಬೂನು ಕೊಟ್ಟರೆ. ನಂಟಂಗೆ ಬೇಜಾರಾಕಾಗದ್‌ತ ನಿಮ್ಮ ಗ್ಯಾನ. ಈ ನಂಟ ಇಲ್ಲಿ ಬಾಯಿ ರುಚಿ ಹತ್ತಿ ಆಗಾಗ ನಂಟನಾಗಿ ಬಂದರೆ ನಿಮ್ಮ ಉಪಚಾರಲಿ ಅರ್ಥ ಸಿಕ್ಕುದು. ಅಂವ ಪುನಾ ಬಾತ್‌ತೇ ತಿಳ್‌ಕಣಿ ಅಗ ಅವಂಗೆ ನೀವ್ ಊಟ ಮಾಡುವ ಹೊತ್ತಿಗೆ ಸರಿಯಾಗಿ ಊಟ ಸಿಕ್ಕಿರೆ ಅವನ ಪುಣ್ಯ. ಅಂವ ನಂಟಂತ ತಿಳ್ಕಂಡ್ ಬೆಳಿಗ್ಗೆ ಬೇಗ ಎದ್ದತ್‌ಲೆ. ಅಗ ಮನೆ ಯಜಮಾನ "ಏಳ್ ಏಳ್ ಎಷ್ಟೊತ್ತ್ ಮಲಗೋಕು. ಮುಸಿ ತುಂಡೋ ಉಮಿ ಕರಿಯೋ ತಕ್ಕಂಡ್ ಹಲ್ಲುಜ್ಜು. ನಡಿ ನಡಿ ಗದ್ದೇಲಿ ಕೆಲ್ಸ ಉಟ್ಟು. ಗದ್ದೆ ಮೂಲೆ ಸೊಲ್ಪ ಕೊಚ್ಚೊಕು. ನಾಟ ನಡಿಕೆ ಉಟ್ಟು. ಮತ್ತೆ ಸೊಲ್ಪ ಸೌದೆ ಹೊಡೆಕುಟ್ಟುತ" ಹೇಳುವೆ. ಈಗ ಗ್ಯಾನ ಮಾಡಿ ಈ ನಂಟನ ಕಥೆ ಹೆಂಗಾದುತ. ಶುರೂಲಿ ಮಣೆ ಹಾಕಿ ಕೊಟ್ ಕುದ್ ಕಣಿ ಅಣ್ಣಾಂತ ಹೇಳುವೆ. (ಹಾಕ್ ಮಣೆ) ಇನ್ನೊಮ್ಮೆ ಮಣೆನ ನೂಕಿ ಕೊಟ್ ಕುದ್‌ಕಾಂತ ಹೇಳುವೆ (ನೂಕ್‌ಮಣೆ) ಮತ್ತೊಮ್ಮೆ ಅಲ್ಲೆಲ್ಲಾರ್ ಮಣೆ ಇದರ್ು ಬೇಕಾರೆ ಹುಡುಕಿ ತಕಾನೇಂತ ಹೇಳುವೆ. (ತೋರು ಮಣೆ) ಇಷ್ಟೊತ್ತಿಗೆ ನಂಟನ ಸೊಂಟ ಮುರ್ದಂಗಾಗಿದ್ದದೆ. ಅಂವ ಈಗ ನಂಟನೂ ಅಲ್ಲ, ಮನೆಯವನೂ ಅಲ್ಲ, ಕಡೆಗೆ ಆಳಿಗಿಂತಲೂ ಕಡೆ ಆಗಿದ್ದದೆ.

ಅದ್ಕೆ ಹೇಳ್ದು ಅತಿಯಾದರೆ ಎಲ್ಲಾ ಹಾಳ್‌ತ.

● **ಬಿ. ಆರ್ ಜೋಯಪ್ಪ,** ಮದೆ.

ನಗೆ ಹನಿಗಳು

ಗಿರಿ : ಯಾಕೆರ ನನ್ನ ಮದ್ವೆಗೇ ಬಾತ್‌ಲೆ

ಹರಿ : ಸಾರಿ ರ. ಇನ್ನೊಂದ್ ಸಲ ನಿನ್ನ ಮದ್ವೆಗೆ ಗ್ಯಾರೆಂಟಿ ಬನ್ನೆ.

ರಾಜ : ನೀನ್ ಯಾಕೆ ಯಾಗೋಳು ಪುಸ್ತಕನ ಕೈಲಿ ಹಿಡ್‌ಕೊಂಬದು

ರವಿ : ಆದ್ ನನ್ನ ಮೇಲೆ ಯಾವುದಾರ್ ಕಾರ್, ಜೀಪು ಕುಟ್ಟಿರೆ ಆವರ ನಂಬರ್ ಬರ್‌ಕಂಬಕೆ.

ಚಂದ್ರು : ನನ್ನ ಕೂಸು ಉಗುರು ಕಚ್‌ತ್ತಾ ಇತ್ತಲ್ಲ ಅದರ ನಾ ನಿಲ್ಸಿಬುಟ್ಟೆ

ಜೋಮು : ಅದೆಂಗೆರ

ಚಂದ್ರು : ಕೂಸುನ ಹಲ್ಲ್‌ನ ಪೂರ್ತಿ ಕೀಳ್ಸಿಬುಟ್ಟೆ.

ಸಂಗ್ರಹ : **ಬಿರುಮಣಿನ ಕೆ. ಪ್ರವೀಣ, ಮಡಿಕೇರಿ**

ಹೆಡ್ಡ್ ಮಾಸ್ಟ್ರ ಅಲ್ಲ ! ಹೆಡ್ಡ ಮಾಸ್ಟ್ರ

ಅಪ್ಪ ಅವ್ವ ಕೂಸ್‌ನ ಸ್ಕೂಲಿಗೆ ಸೇರ್‍ಸುವೆ. ಆ ಕೂಸು ಬಾರೀ ಲಾಯ್ಕ್ ಇದ್ದದೆ. ಆಗ ಆ ಕೂಸುನ ಕ್ಲಾಸ್ ಮಾಸ್ಟ್ರು ನೋಡಿ ಈ ಕೂಸುನೆ ಇಷ್ಟ್ ಲಾಯ್ಕ್ ಇರ್‌ಕನ್ ಕೂಸುನ ಅಮ್ಮ ಎಷ್ಟ್ ಲಾಯಿಕ್ ಇರ್‍ದ್ ತ ಗ್ಯಾನ ಮಾಡಿ ಕೂಸುನ ಹತ್ರ ಕರ್‍ಡ್, ಪುಟ್ಟ ನಿಮ್ಮ ಅಮ್ಮನ ನಾನ್ ತುಂಬಾ ಕೇಳ್ದಿ ತ ಹೇಳ್ ತ ಕೂಸುನ ಹತ್ರ ಹೇಳಿ ಕಳ್ಸಿದೆ. ಆ ಕೂಸು ಹೋಗಿ ಅವರ ಅಪ್ಪನ ಎದುರನೆ ಅಮ್ಮಂಗೆ ಸ್ಕೂಲ್‌ಮಾಸ್ಟ್ರ ಹೇಳ್ಡರ್‍ನೆ ಹೇಳ್ದ್. ಆಗ ಅಪ್ಪ ಹೌದಾ ! ಸ್ಕೂಲ್ ಮಾಸ್ಟರ್ ಹಂಗೆ ಹೇಳ್ತ ? ನೀನ್ ಹೋಗಿ ಮಾಸ್ಟ್ರ್‌ಗೆ ಹೇಳ್, ನಮ್ಮ ಅಮ್ಮ ನಿಮ್ಮನ ಮನೆಗೆ ಬಾಕೆ ಹೇಳ್ತ್‌ತ ಅಪ್ಪ ಹೇಳ್ಟ್. ಆಗ ಅಮ್ಮಂಗೆ ಸಿಟ್ಟ್ ಬಂದ್ ಬೈದದೆ. ಅಲ್ಲ ನಿಮಿಗೇನ್ ಬಾಷೆ ಇಲ್ಲೆ. ಅಂವ ಯಾಕೆ ಮನೆಗೆ ಬಾದೂತ! ನಿಂಗೆ ಗೊತ್ತಿಲ್ಲನೆ, ನೀನ್ ಸುಮ್ಮನಿರ್. ಹೆಂಗು ನೀನ್ ರೊಟ್ಟಿ ಮಾಡಿಕೆ ಅಕ್ಕಿ ಹೊಡಿ ಇಲ್ಲೇತಾ ಹೇಳ್ತಾ ಇದ್ದಲಾ ! ಅದ್ಕೆ ಇಂದ್ ಅಂವ ಬಂದದೆ ಅಂವ ಬಾಕನ ಅಂವಂಗೆ ಕಾಫಿ ಎಲ್ಲಾ ಕೊಡು. ಅವ ಕಾಫಿ ಕುಡಿತಾ ಇದ್ದಂಗೆ ನಾನ್ ಬನ್ನೆ. ನಾನ್ ಚಪ್ಪಲ್ ಬಿಚ್ಚ್‌ವ ಸದ್ದ್ ಕೇಳ್ಕನ ಅಂವಂಗೆ ಹೇಳ್. ಅಯ್ಯೋ, ನನ್ನ ಗಂಡ ಬಾತ್. ಅವು ಈಗ ಕಾಫಿ ಕುಡ್ದ್ ಹೋದವೆ. ಅವು ಹೋಕೆ ಮುಟ್ಟಾ ನೀವು ಈ ಸೀರೆ ಉಟ್‌ಕಂಡ್ ಇಲ್ಲಿ ಅಕ್ಕಿ ಬೀಸ್‌ತಾ ಇರಿ. ಆಗ ಅವು ಯಾರೋ ಹೆಂಗ್‌ಸನ ಕರ್‍ದ್ ಅಕ್ಕಿ ಬೀಸುತಾ ಉಟ್ಟ್‌ತಾ ಗ್ಯಾನ ಮಾಡುವೆ ತಾ ಹೇಳ್‌ತಾ ಹೆಣ್ಣ್ ನೊಟ್ಟ್‌ಗೆ ಹೇಳಿ ಅಂವ ಎಲ್ಲೊ ಹೋದೆ. ಅಷ್ಟೊತ್ತಿಗೆ ಸ್ಕೂಲ್ ಮಾಸ್ಟ್ರ ಬಂದದ್ದರ್‍ನೆ ನೋಡಿಕಂಡ್ ಗಂಡ ಮನೆಗೆ ಬಂದ್ ಚಪ್ಪಲ್ ಬಿಚ್ಚ್‌ವ ಸದ್ದ್ ಕೇಳಿ ಹೆಣ್ಣ್ ಗಂಡ ಹೇಳ್ದಂಗೆ ಮಾಸ್ಟ್ರ್‌ಗೆ ಹೇಳಿ ಸೀರೆ ಉಡ್ಸಿ ಅಕ್ಕಿ ಬೀಸಿಕೆ ಕೂರ್‍ಸಿದೆ. ಅಷ್ಟೊತ್ತಿಗೆ ಗಂಡ ಒಳಗೆ ಬಂದ್ ಅಕ್ಕಿ ಬೀಸವನ ಮುಂದನೆ ಕುರ್ಚಿ ಹಾಕ್ಕಂಡ್ ಕುದ್ದದೆ ಸುಮಾರ್ ಅರ್ಧ ಚೀಲ ಅಕ್ಕಿ ಬೀಸಿ ಆತ್ ತೇಳ್ಕನ ಗಂಡ ಎದ್ದ್ ಹೊರಗೆ ಹೋದೆ. ಅಂವ ಹೊರಗೆ ಹೋದರ್‍ನೆ ನೋಡಿಕಂಡ್ ಸ್ಕೂಲ್ ಮಾಸ್ಟ್ರ ಅಯ್ಯೋ ನನ್ನ ಸೊಂಟ ಬಿದ್ದ್ ಹೋತು. ನೀನ್ ಬಾಕೆ ಹೇಳ್ದ್ ಬ್ಯಾಡ ಇಲ್ಲಿ ಬಂದ್ ಅಕ್ಕಿ ಬೀಸೂದೂ ಬ್ಯಾಡ. ತೇಳಿ ಸೀದಾ ಎದ್ದ್ ಅಂವ ಓಟ ಕಿತ್ತದೆ. ಹಿಂಗೆ ಒಂದ್ ತಿಂಗ ಕಳ್ತ್. ಕೂಸುನ ಅಮ್ಮ ಕೂಸುನ ಕರ್‍ದ್ ಕೂಸುನ ಹತ್ರ ಹೇಳ್ದ್. ನೀನ್ ಇಂದ್ ಹೋಗಿ ಅಮ್ಮ ನಿಮ್ಮನ ತುಂಬಾ ಕೇಳ್ತ್, ನಿಮ್ಮನ ಮನೆಗೆ ಬಾಕೆ ಹೇಳ್ತ್‌ತಾ ಮಾಸ್ಟ್ರ ಹತ್ರ ಹೇಳ್. ನಾನ್ ಹಿಂಗೆ ಹೇಳ್ದೀತ ಅಪ್ಪಂಗೆ ಹೇಳ್ಬಡ ತ ಕೂಸುನ ಹತ್ರ ಹೇಳ್ದ್. ಆಗ ಕೂಸು ಹೋಗಿ ಮಾಸ್ಟ್ರೆ ! ಮಾಸ್ಟ್ರೇ ! ನಮ್ಮ ಅಮ್ಮ ನಿಮ್ಮನ ತುಂಬಾ ಕೇಳ್ತ್, ನೀವು ಮನೆಗೆ ಬರೋಕಡ ತ ಹೇಳ್ದ್. ಆಗ ಮಾಸ್ಟ್ರ ಯಾಕೆ ? ಕಳ್ದ ತಿಂಗ ಬೀಸಿದ ಅಕ್ಕಿ ಹೊಡಿ ಖಾಲಿ ಆತ್‌ಗಡಾ ತ ಕೇಳ್ದ್.

○ ಒಡಿಯಮನ ಚಿತ್ರ ಈರಪ್ಪ

ಮೇಕೇರಿ.

ಮುತ್ತಣ್ಣನ....ಫ್ರಿ....ಕಥೆ

ಒಳ್ಳೆ ಮೊದುವೆ ಸಮಯ. ಎಲ್ಲೊ ಅಪ್ಪಿ ತಪ್ಪಿ ಮುತ್ತಣ್ಣಂಗೆ ಒಂದು ಮೊದುವೆ ಕಾಗದ ಪೋಸ್ಟ್‌ಲಿ ಸಿಕ್ಕಿಬುಡ್ತ್. ಬಾರಿ ಕುಷಿಯಾತ್ ಮುತ್ತಣ್ಣಂಗೆ. ಯಾಕೆತೇಳ್ರೆ ಹೊಸದಾಗಿ ಮೊದುವೆಯಾದ ಮುತ್ತಣ್ಣ ಹೆಣ್ಣ್‌ನೊಟ್ಟ್‌ಗೆ ಮಡಿಕೇರಿ ತೋರಿಸಿಕಂಡ್ ಹಂಗೆ ಮೊದುವೆ ತೀರಿಸಿ ಟೈಮ್ ಇದ್ದರೆ ಒಂದ್ ಪಿಚ್ಚರ್ ನೋಡಿ ಕಂಡ್ ಬರನಾಥ ಒಂದು ಐಡಿಯಾ ಹಾಕಿತ್. ಹಂಗೆ ಮೊದುವೆ ದಿನ ಬೆಳಗ್ಗೆ ಹೊರಟೊ. ಸನಿಸನೀತ ಬಸ್ಸ್ ಅರ್ಧ ದಾರಿಲೇ ರಿಪೇರಿಯಾತ್ ಸುಮಾರು ಅರ್ಧ ಗಂಟೆ ನೋಡಿ ಬೇರೆ ಜನ ಎಲ್ಲಾ ಬೇರೆ ಬೊಸ್ ಹತ್ತಿ ಹೋದೊ. ಆದರೆ ಜಿಪುಣ ತೀಳ್ರೆ ಮುತ್ತಣ್ಣ ಪೇಮಸ್ ಆ ಊರಿಗೆ. ಹಂಗೆ ಬೊಸ್ ರಿಪೇರಿ ಆಗುವರೆಗೆ ಕಾದ್ ಹೊರ್‌ಟೊ ಮಡಿಕೇರಿ ತಲುಪುಕನೆ ಗಂಟೆ ಒಂದುವರೆ ಆವುಟು. ಹೋಗಿ ಹಣಕಟ್ಟ್‌ಕೆ ನೋಡಿರೆ ಜನ ಎಲ್ಲಾ ಊಟ ಮಾಡಿ ಸಿಅಡಿಕೆ ಬಾಚುವೆ. ಈ ಮುತ್ತಣ್ಣ ಮೆಲ್ಲೆ ಜಾರಿಕೆ ನೋಡ್ತ್ ಯಾಕೆತೇಳ್ರೆ ಹಣ ಕಟ್ಟ್‌ರೆ ಊಟ ಸಿಕ್ಕ್‌ದು ಡವುಟು. ಅಂತು ಮರಿಯಾದಿ ಪ್ರಶ್ನೆ ತೇಳಿ ಹಣ ಕಟ್ಟ್, ಮುಖ ಪೂಜಿಕಂಡ್ ಬಸ್‌ಸ್ಟಾಂಡಿಗೆ ಬಂದ್ ಪುಳಿಚಾರ್ ಹೊಟೇಲಿಗೆ ನುಗ್ಗಿದೊ. ಹೆಣ್ಣ್ ಊಟಕ್ಕೆ ಏಷ್ಟ್ ರೂಪಾಯಿತ ಕೇಳ್ತ್ ಅದಿಕ್ಕೆ ಹೋಟೆಲಂವ 10 ರೂಪಾಯಿ ದನಿ ಅಂತ ಹೇಳ್‌ಕಾಕನ ಅಲ್ಲಿಂದಲೂ ಜಾರಿಕೆ ನೋಡ್ತ್. ಅಂದರೆ ನೀವು ಈ ಊಟಕ್ಕೆ 10 ರೂಪಾಯಿ ತಕಂಡ್ರಿಯುಲ ಅಂದ್ರೆ ಯಾವುದಕೆಲ್ಲಾ ಎಷ್ಟೆಷ್ಟ್ ರೂಪಾಯಿ ತ ಬುಡ್ಸಿ ಹೇಳಿಕ ಹೇಳ್ತ್. ಅದಿಕ್ಕೆ ಹೋಟೇಲಂವ ತಲೆ ಕೆರ್‌ಕಂಡ್ ಅನ್ನಕ್ಕೆ ನಾವು 10 ರೂಪಾಯಿ ಮಾತ್ರ ತಕಂಬದು. ಬಾಕಿ ಸಾಂಬರ್, ಪಲ್ಯ ಫ್ರಿ ಅಂತ ಹೇಳ್‌ಕಾಕನ ಕುಷಿಯಾದ ಮುತ್ತಣ್ಣ ಆ ಫ್ರಿ ಇರುವಂತದೆಲ್ಲಾ ಒಮ್ಮೆ ತಕಂಡ್ ಬಾ ಅಂತ ಹೇಳಿ ಬುಡ್ತ್.

● ಗುತ್ತಿನುಂಡ ಪಿ. ತಮ್ಮಯ್ಯ

ಚೇರಂಬಾಣೆ

ಹಳ್ಳ್ಯೊವು ನಾವೆಲ್ಲ

ದಾಟ ! ತೊಟ್ಟಿಲ ಹೊತ್ಕೊಂಡು
ತೌರ್‌ಬಣ್ಣ ಉಟ್‌ಕೊಂಡು

ಹಳ್ಳ್ಯವು ನಾವೆಲ್ಲ । ಹಳ್ಳ್ಯನೆ ನಾವ್ಗೆಲ್ಲ ।
ಹಳ್ಳ್ಯಲಿ ಇರುವಂತ ಸುಖನಿಂಗೆ । ಓ ಹೃದ ।
ಪೇಟೆಲಿ ಎಲ್ಲ್ಯುಟ್‌ದ್ ನೀ ಹೇಳ್ ॥

ಆ ಗುಡ್ಡೆ ಬೆಟ್ಟದ । ಮೊಣ್ಣೆಲ್ಲ ಚಿನ್ನನೆ ।
ಮೊಣ್ಣ್‌ಲಿ ದುಡಿವ ಆ ರೈತಂಗೆ । ಓ ಹೃದ ।
ನಿಂಗೆಲ್ಲಿಟ್ಟ್ಟ ಆ ಮೊಣ್ಣ್ ನೀ ಹೇಳ್ ॥

ಭಿತ್ತಿದ ಗದ್ದೆಲಿ । ಭತ್ತದ ಆ ಸುಗ್ಗೀ ।
ನೋಡಿರೆ ಹೃದಯಾ ತಣಿಯೋಕು । ಓ ಹೃದ ।
ನಿಂಗೆಲ್ಲಿಟ್ಟ್ಟ ಆ ಪುಣ್ಯ ನೀ ಹೇಳ್ ॥

ಕಾಡ್‌ಲಿ ದನಕರ್ । ಕಾಡೆಲ್ಲ ಮೇಂದ್‌ದ್ ।
ಕೊಡುವಂತ ಅಮೃತದ ಹಾಲ್‌ನ । ಓ ಹೃದ ।
ಬುಟ್ಟ್ಟ ನೀ ಹೋದ್ಯಾಕೆ ನೀ ಹೇಳ್ ॥

ಹೊಲಗದ್ದೆ ತೋಟಂದ । ಮನೆಸುತ್ತ ಕಾಡ್‌ಂದ ।
ಬೀಸುವ ಗಾಳಿ ಅದ್ ಸ್ವರ್ಗ । ಓ ಹೃದ ।
ನಿಂಗೆಲ್ಲಿಟದ್ ಪೇಟೆಲದ್ ನೀ ಹೇಳ್ ॥

ಮಲೆನಾಡ ಜನಂಗೆಲ್ಲ । ಮೊಣ್ಣ್‌ಲೆ ಬೆಳದ್ದಿವೆ ।
ಕಳ್ಳತನ ಅವುಲ್ಲೆ ಆ ಮೋಸ । ಓ ಹೃದ ।
ಪೇಟೆಲಿ ಸಿಕ್ಕಿದದ್ ನೀ ಹೇಳ್ ॥

ಹಕ್ಕಿಗ ಚಿಲಿಪಿಲಿ । ಹಾಡುವ ದೆನಿಲ್ಲ್ಯಾಕ್ ॥
ಮಕ್ಕಳ ಬಿಸಿ ಇಲ್ಲೆ ಹಳ್ಳಿಲಿ । ಓ ಹೃದ ।
ಪೇಟೆ ಮಕ್ಕಳ ಒಮ್ಮೆ ನೀ ಹೇಳ್ ॥

ಹಾಳ್ ಮೂಳೆಲ್ಲದ್ । ನೀತಿಂದ್ ಪೇಟೆದ್ ।
ಅವ್ವ ಇಕ್ಕುವ ಗಂಜಿ ನೆನಪಾದು । ಓ ಹೃದ ।
ಹಳ್ಳಿ ಬಾಳ್‌ನ ಗ್ಯಾನ ನಿಂಗಾದು ॥

ಅಂತ ಹಳ್ಳೀನ ಬುಟ್ । ಪೇಟೆಗೆ ನೀ ಬಂದ್ ।
ಪೇಟೆ ದುಶ್ಚಟಗಳ ಕಲಿಬೇಡಾ ॥ ಓ ಹೃದ ।
ನಿನ್ನವ್ವ ಹಳ್ಳಿಲಿ ಅಳುತ ಉಟ್ಟ್ಟ ॥

ಹೆತ್ತಪ್ಪ ಅವ್ವನ । ನಿನ್ನಕ್ಕ ತಂಗೇನ ।
ನೀ ಮರ್ತ್ ಪೇಟೆಗೆ ಹೋಬಡ । ಓ ಹೃದ ।
ಕುಲಕೀರ್ತಿ ತರೊಕುನಿ ಈ ಮನೆಗೆ ॥

ಒಪ್ಪೊತ್ತು ಉಂಡರು । ಹಳ್ಳಿಬಾಳೆ ಲ್ಯಾಕ್ ।
ಯಾರ ಹಂಗುನು ಇಲ್ಲೆ ಹಳ್ಳಿಲಿ । ಓಹೃದ ।
ನಮ್ಮ ಹಳ್ಳಿನ ಸುಖನ ನೀ ಹೇಳ್ ॥

● **ಹೆಚ್. ಬಿ. ಭವಾನಿಶಂಕರ್,**
ಬೆಂಗಳೂರು.

ಕುದ್ಕನ ಉಪಾಯ್‌ಲಿ ಅದ್ರ ಪಡೆ ಅಳ್ದ್ ಹೋಕೆ ಕಾರಣ

ಒಂದ್ ಊರಿಗೆ ಒಂದ್ ಊರ್‌ಗೌಡ. ಅವನ ಮನೇಲಿ ಒಂದ್ ಕುದ್ಕ ಮತ್ತೆ ಹಂದಿ ಕೆಲ್ಸಕ್ಕೆ ಸೇರಿವೆ, ಒಂದ್ ದಿನ ಕುದ್ಕ ಗದ್ದೆ ಹೂಡಿಕ್ಕೆ ಹೋದೆ, ಹೂಡ್ಕನ ಒಂದ್ ಕಲ್ಲ್ ನೇಗ್‌ಲ್ಗೆ ಸಿಕ್ಕಿದೆ, ಆ ಕಲ್ಲ್‌ನ ತೆಗೆಕ್ಕೆ ಆದುಲೆ. ಅದ್ಕೆ ಏನ್ ಮಾಡ್ದುತ ಗ್ಯಾನ ಮಾಡ್ತ್. ಹಂಗೆ ಗ್ಯಾನ ಮಾಡ್ಕನ ತೋಟೆ ಹಾಕ್ವ ಉಪಾಯ ಕುದ್ಕಂಗೆ ಹೊಳ್ತ್, ಕುದ್ಕ ಗೌಡಂಗೆ ಹೋಗಿ ಹೇಳ್ತ್. ಹಿಂಗೆ ಮಾಡ್ರೆ ಮಡೆಕ್‌ತ ತೋಟೆ ಹಾಕಿಕೆ ತಯಾರಿ ಮಾಡ್ವೆ. ತೋಟೆಗೆ ಬೆಂಕಿ ಕೊಡೋ ಕಲ ! ಅದ್ಕೆ ಹಂದಿನ ಕಳ್ಸಿವೆ. ಹಂದಿ ಹೆಂಗೆ ಇದ್ದದೆತ ಗೊತ್ತುಟಲ್ಲ. ಬರೀ ದಡ್ಡ. ಅಸ್ಕೆ ಅದ್ ಒಪ್ಪಿತ್. ತೋಟೆಗೆ ಬೆಂಕಿ ಕೊಟ್ಟ್ಟ ಬ್ಯಾಗ ಬರ್ಕುತ ಕುದ್ಕ ಹೇಳ್ತ್‌ಲೆ, ಹಂದಿಗೆ ಹೊಟ್ಸೆ....ಗೊತ್ತ್‌ಲೆ. ಹಂದಿ ಬೆಂಕಿ ಕೊಟ್ಟತ್, ತೋಟೆ ಹೋಟ್ಟತ್. ಹಂದಿನ ಎರ್ಡ್ ಕಣ್ಣ್ ಚಳ್ಳೆ ಆತ್. ಈಗ ಕುದ್ಕಂಗೆ ಏನ್ ಮಾಡ್ದುತ ಆತ್. ಗೌಡನ ದಾರಿಲ್ಲಿ ಕರ್ಕಂಡ್ ಹೋತ್. ಬಾಕನ ಕುದಂಗೆ ಒಂದ್ ಉಪಾಯ ಹೊಳ್ತ್. ಒಂದು ಕೆರೆ ಸಿಕ್ಕಿದೆ ಅದ್ಕ ಬೀಳೊಂಗೆ ಮಾಡ್ತ್. ಮತ್ತೆ ಕುದ್ಕ ಗುಡ್ಡದವ್ಯಾಲೆ ಹತ್ತಿ ಊರವುಕ್ಕೆಲ್ಲ ಕೇಳುವಂಗೆ ಕರ್ದ್ ಹೇಳ್ತ್, ಹಂದಿ ಬಿದ್ದ್‌ಹೋತೋ... ಒಂದ್‌ಸಲ ಓಡಿ ಬನ್ನಿ ಮಾರಾಯರೇ...ತ. ಆಷ್ಟೊತ್ತಿಗೆ ಮನೆವೆಲ್ಲ ಬಡಿಗೆ, ಕೋವಿ, ಕತ್ತಿ ಎಲ್ಲಾ ಹೊತ್ತ್‌ಕಂಡ್ ಓಡಿಬಂದ್ ಬುಟ್ಟೊ. ಹಂದಿನ ಕೊಂದ್ ಅಚ್ಚ್‌ಕಟ್ಟ್ಟ ಮಾಡ್ವೊ. ಅಷ್ಟಾಕನ ಕುದ್ಕ ಕುತಂತ್ರ ಬುಟ್ಟತ್‌ಲೆ. ಕುದ್ಕ ಹೋಗಿ ಮನೆಗೆಲ್ಲ ಬೆಂಕಿ

(20ನೇ ಪುಟ ನೋಡಿ)

ಮನೆ ಮದ್ದಾಗಿ 'ನೀರುಳ್ಳಿ'

ಈಗೀಗ ಅಂದ್ರೆ, ಕಾಲ ಬದಲಾದಂಗೆ, ವಿಜ್ಞಾನ ಮುಂದು ವರ್ದಾಂಗೆ ಸಣ್ಣ ಪುಟ್ಟ ಕಾಯಿಲೆ ಬಂದ್ರೆ ಸಾಕ್ ನಾವು ಓಡ್ದೇ ಸೀದಾ ಇಂಗ್ಲೀಷ್ ಡಾಕ್ಟರ ಹತ್ರ. ಇದೊಂದು ಚಟ ಆಗಿ ಹೋವ್ಟ. ಇಂಗ್ಲೀಷ್ ಮೊದ್ದುಗಳ್ನ ಹೆಚ್ಚಾಗಿ ಉಪಯೋಗಿಸುದಂರ್ದ ಕಾಯಿಲೆ ಏನೋ ಬೇಗ ವಾಸಿ ಆದು, ಆದಂರ್ದ ಅಷ್ಟೇ ಶರೀರಕ್ಕೆ ತೊಂದರೆ ಉಟ್ಟ್ ತೇಳ್ದ್ನ ನಾವು ಮುಖ್ಯವಾಗಿ ತಿಳ್ಕಣಕಾದೆ.

ಅದ್ ಏನೇ ಇರ್ಲಿ, ನಾವು ಈಗ ನಮ್ಮ ಮನೆ ಡಾಕ್ಟರ್ ನೀರುಳ್ಳಿಯುವರ ಬಗ್ಗೆ ಮಾತಾಡನೊ. ನೀರುಳ್ಳಿ ಸಾಮಾನ್ಯವಾಗಿ ಎಲ್ಲರ ಮನೆಲೂ ಇದ್ದೇ ಇದ್ದದೆ. ಇದೊಂದು ದಿನೋಳು ಉಪಯೋಗಿಸುವಂತ ಪ್ರಮುಖ ತರಕಾರಿ ಬೆಳೆ.

ಕೊಡಗುಲಿ ನೀರುಳ್ಳಿ ಬೆಳ್ಯುವು ಎಲ್ಲೂ ಕಾಂಬೊದುಲೆ. ಮನಸ್ಸ್ ಮಾಡ್ರೆ ನಮ್ಮ ಖರ್ಚಿಗೆ ತಕ್ಕ ಖಂಡಿತವಾಗಿ ಬೆಳ್ಸಿಕಣಕ್. 'ಮನಸ್ಸಿದ್ದರೆ ಮಾರ್ಗ' ಅಲ್ಲಾ ?

ನೀರುಳ್ಳಿಲಿ ಎರಡ್ ತರ ಉಟ್ಟ್. ಒಂದು ಕೆಂಪು ನೀರುಳ್ಳಿ, ಎರಡನೆದ್ ಬಿಳಿ ನೀರುಳ್ಳಿ. ಮೊದ್ದ್‌ಗೆ ಉಪಯೋಗಿಸಿಕ್ಕೆ ಬಿಳಿ ನೀರುಳ್ಳಿನೇ ಒಳ್ಳೆದ್.

ಕಿವಿ ನೋವುಗೆ : ನೀರುಳ್ಳಿ ರಸನ ಬಿಸಿ ಮಾಡಿ, ಆರಿಸಿದ ಮೇಲೆ ಹಾಕಿರೆ. ಕೆಲವೇ ನಿಮಿಷಲಿ ಕಿವಿ ನೋವು ಗುಣ ಆದೆ.

ದೃಷ್ಟಿ ಶಕ್ತಿಗೆ : ನೀರುಳ್ಳಿ ದೃಷ್ಟಿ ಶಕ್ತಿಯನ್ನ ಸಹ ಹೆಚ್ಚಿಸಿದೆ. ಕಣ್ಣಿನ ದೃಷ್ಟಿ ಮಂಜಾಕನ ನೀರುಳ್ಳಿ ರಸನ ಕಣ್ಣ್‌ಗೆ ಕಾಡಿಗೆ ತರ ಹಚ್ಚಿರೆ ಒಳ್ಳೆದಾದೆ.

ಮೂಗುಲಿ ರಕ್ತ ಬಾದು : ನೀರುಳ್ಳಿಯನ್ನ ಹಾಲ್ ನೊಟ್ಟಿಗೆ ಕುದಿಸಿ ಕುಡಿಯೊಕು. ನೀರುಳ್ಳಿನ ಜಜ್ಜಿ, ತೆಗ್ದ ಶುದ್ಧ ರಸನ ನಶ್ಯದ ತರ ಮೂಗುಗೆ ಬುಟ್ಟರೆ ಅನೇಕ ತರದ ಮೂಗಿನ ಒಳಗಿನ ಸೂಕ್ಷ್ಮ ರೋಗಗ ನಿವಾರಣೆ ಆದೆ.

ನಿದ್ರೆ ಬಾರದೇ ಇರೊವುಕೆ : ನಿದ್ದೆ ಕಮ್ಮಿ ಇರೊವು ನೀರುಳ್ಳಿನ ಮೊಸರೊಟ್ಟಿಗೆ ಕಲಸಿ ತಿಂದರೆ ನಿದ್ರೆ ಲಾಯಕ್ ಬಂದದೆ.

ಪಿತ್ತಕ್ಕೆ : ತಲೆ ತಿರ್ಗುದು, ವಾಂತಿ ಬಂದಾಗೆ ಆದು ಮೊದಲಾದ ಪಿತ್ತ ದೋಷಕ್ಕೆ ಹಸಿ ನೀರುಳ್ಳಿ ಸೇವನೆ ಒಳ್ಳೆದ್.

ಮೈ ತುರ್ಸುದು : ನೀರುಳ್ಳಿ ರಸನ ಮೈಗೆ ಪೂಜುದಂರ್ದ ಮೈದ್ ತುರ್ಸುವ ಗುಣ ನಿವಾರಣೆ ಆದೆ.

ಮಲಬದ್ಧತೆ, ಮೂಲವ್ಯಾಧಿ : ನೀರುಳ್ಳಿ ತಿನ್ನುದಂರ್ದ ಕರುಳು ಶಕ್ತಿಯುತವಾದೆ. ದಿನೋಲು ಬೆಳ್ಗೆ-ಬೆಳ್ಗೆ ಒಂದೊಂದು ಹಸಿ ನೀರುಳ್ಳಿನ ಕೆನೆ-ಮೊಸುರೊಟ್ಟಿಗೆ ಸೇರ್ಸಿ ತಿಂದ್‌ಕಂಡ್ ಬಂದರೆ ಹೊರ್ಕಡೆ ಸರಿಯಾಗಿ ಆದೆ. ಇದೇ ಚಿಕಿತ್ಸೆಂದ ಮೂಲವ್ಯಾದಿನೂ ಕಮ್ಮಿ ಆದೆ.

ಶಕ್ತಿ ವರ್ಧಕ : ನೀರುಳ್ಳಿನ ಅರ್ದ್ ಜೇನ್‌ಲಿ ಹಾಕಿ ಪಾತ್ರೆ ಬಾಯಿನ ಲಾಯಕ್ ಆಗಿ ಮುಚ್ಚಿ, ನಲ್ವತ್ತು ದಿನಗಳ ವರೆಗೆ ಇಟ್ಟ್ ಬುಡೋಕು. ಆಮೇಲೆ ಬೆಳ್ಗೆ-ರಾತ್ರಿ ಎರಡೆರಡ್ ಚಮಚಗಳಂಗೆ ಇದನ್ನ ತಿಂದ್‌ಕಂಡ್ ಬಂದರೆ ಒಳ್ಳೆ ಶಕ್ತಿ ಬಂದ್ ದೇಹ ಪುಷ್ಟಿಯಾದೆ.

ಚೇಳು ಕಚ್ಚಿದಕ್ಕೆ : ಈರುಳ್ಳಿನ ಜಜ್ಜಿ, ಉಜ್ಜುದಂರ್ದ ಚೇಳು ಕಚ್ಚ್‌ಕನ ಆಗ್ವ ಅಸಾಧ್ಯ ಉರಿ, ನೋವು ಕಮ್ಮಿ ಆದೆ. ಇದೇ ಚಿಕಿತ್ಸೆ ಜೇನುನೊಣ ಕಚ್ಚ್‌ಕನೂ ಉಪಯೋಗಕ್ಕೆ ಬಂದದೆ.

○ ಸಂಗ್ರಹ : **ಕೆ. ಎಸ್. ಮನೋಹರ**
ಮದೆ.

(ಹಿಂದಿನ ಪುಟದಿಂದ)

ಕೊಟ್ಟತ್. ಜೋರಾಗಿ ಬೊಬ್ಬೆ ಹಾಕಿತ್. ಮನೆಗೆ ಬೆಂಕಿ ಬಿದ್ದ್ ಹೋತ್ ಓಡಿ ಬನ್ನಿತಾ. ಜನಗ ತೀರಾ ಹಂದಿನ ಬುಟ್ಟ್ ಓಡಿ ಬಂದೋ. ಈಗ ಕುದ್ಕಂದ್ ತಕ್ಕಣೆ ಖುಷಿ ತಿಂದ್ ತಿಂದ್ ಹೆಚ್ಚಾದರ ಕೈಲಿ ಬಾಲಲಿ ಹಿಡ್ಕಂಡ್, ಓಡ್ತ್ ಓಪ್ಕನ ಬಾಲಲಿ ಇದ್ದದ್ ತೀರಾ ಬಿದ್ದ್‌ಹೋತ್, ಸಿಟ್ಟ್ ಬಂದ್ ಬಾಲಕ್ಕೆ ಹಿಡ್ಕಂಡ್ ಗುದ್ದಿತ್. ಮಾರ್ನೆ ದಿನ ಪಕ್ಕದ ಊರ್ ಹಾರವನ ಮನೇಲಿ ಮದ್ವೆ. ಒಬ್ಬ ತುಪ್ಪಕ್ಕೇಂತ ಊರೂರ್ ಹೋತ್. ಕುದ್ಕ ಕಂಡ್ ಬುಟ್ಟ್ ಅವಂಗೆ ತುಪ್ಪ ಬೇಕಸ್ಟ್ ಅವರ ಬಾಲಂದ ಕೊಟ್ಟತ್. ಕುದ್ಕನ ಕುತಂತ್ರಂದಾಗಿ ಮಾರ್ನೆದಿನ ಜನ ಬ್ಯಾಟೆ ಮಾಡ್ದೊ. ಒಂದ್‌ಮಾಯ್ಣದ ಗೊಂಬೆ ಮಾಡಿ ಕುದ್ಕನ ದಾರ್ಗಿ ಇಟ್ಟೊ. ಕುದ್ಕ ಇದನ್ನ ನೋಡಿ ಗೊಂಬೇನ ಮುಟ್ಟೇತ್. ಆಗ ಕುದ್ಕನ ಮೈ ಕೈ ತೀರಾ ಮಾಯ್ಣ ಆತ್. ಮಾಯ್ಣ ಆತ್‌ತ ಮಣ್ಣ್‌ಗೆ ಬಿದ್ದ್ ಹೊಡ್ದಾಡ್ತ್. ಕುದ್ಕನ ಸುರ್ಪ ಬ್ಯಾರೆ ಆತ್. ಮಾರ್ನೆದಿನ ಅದ್ ನನ್ನ ಜಾತಿ ಬ್ಯಾರೆ ಆತ್‌ತ ಹೇಳ್ತ್. ನಂಗೆ ಭೂತ ಕಟ್ಟಿಕೆ ಗೊತ್ತ್‌ಟುತ ಹೇಳ್ತ್. ಹಂಗೇನೆ ಹಂಞ ದಿನ ಕಳ್ದ್ ಕುದ್ಕನ ಭೂತ ಮರಾತ್. ಆದಿನ ಕುದ್ಕನ ಪಡೆವೆಲ್ಲ ಸೇರ್ದೊ. ಕುದ್ಕನ ಭೂತ ಬರೀ ಡೋಂಗಿತ ಗೊತ್ತಾಗಿ ಎಲ್ಲಾ ಕುದ್ಕಂಗಳ ಜನಗ ಕೊಂದ್ ಹಾಕಿದೋ.

ನೀವ್‌ಸ ಹೋಗಿದರಿಗಡ ಕುದ್ಕ ಕೊಲ್ಲಿಕೆ ! ಯಾರೋ ಹೇಳ್ದೋತ ಪಳಮೆ.

● **ಕುದುಪಜೆ ಹೇಮರಾಜ್** ಗಣಪತಿ, ಮದೆ.

ಹಾರ್ದಿಕ ಶುಭಾಶಯಗಳು

ನವಜಾತ "ಕೊಡಗು ಸಂಗಾತಿ" ಪತ್ರಿಕೆಯು ಗೌಡ
ಜನಾಂಗದವರ ಮನೆ ಮನೆಗಳಲ್ಲಿ ಜ್ಞಾನ
ದೀವಿಗೆಯಾಗಿ ಬೆಳಗಲಿ ಎಂದು ಶುಭ ಹಾರೈಸುವ.

ಶ್ರೀಮತಿ ಮತ್ತು ಶ್ರೀ ಕೂಡಕಂಡಿ ಮುತ್ತಣ್ಣ ಅಪ್ಪಾಜಿ
ಮಾಜಿ ಮಾಸ್ಟರ್ ವಾರೆಂಟ್ ಆಫೀಸರ್,
ಭಾರತೀಯ ವಿಮಾನದಳ, ಮಡಿಕೇರಿ.

ಧ ನ್ಯ ವಾ ದ ಗ ಳು

ಕೆಳಗೆ ಕಾಣಿಸಿದ ದಾನಿಗಳು "ಕೊಡಗು ಸಂಗಾತಿ" ಪತ್ರಿಕೆಗೆ ತಮ್ಮ ಜೀವಾವಧಿ ಸದಸ್ಯತ್ವವನ್ನು ಕೊಟ್ಟು ಸಹಕರಿಸಿದ್ದಾರೆ. ಇವರಿಗೆ ಸಂಗಾತಿ ಬಳಗದ ಕೃತಜ್ಞತೆಗಳು.

ಶ್ರೀಮತಿ ಮತ್ತು ಶ್ರೀ ಕೋರನ ಉತ್ತಯ್ಯ ವಿಶ್ವನಾಥ, ಮುತ್ತಿಕಾಡ್, ಕೊಡಗು.	1,500
ಶ್ರೀಮತಿ ಮತ್ತು ಶ್ರೀ ಕೂಡಕಂಡಿರ ಎಂ ಅಪ್ಪಾಜಿ, ನಿವೃತ್ತ ವಾಯುಸೇನೆ, ಮಡಿಕೇರಿ.	1,000
ಶ್ರೀಮತಿ ಮತ್ತು ಶ್ರೀ ವಿ.ಎಸ್. ಭರತ್ ಕುಮಾರ್, ವೆಸ್ಟರ್ನ್ ವುಡ್ ವರ್ಕ್ಸ್, ಕೈಗಾರಿಕಾ ವಸಾಹತು, ಮಡಿಕೇರಿ.	1,000
ಶ್ರೀಮತಿ ಮತ್ತು ಶ್ರೀ ಹೊಸೂರು ಜಿ. ಸೀತಾರಾಂ, ವಿಜಯಾ ಬ್ಯಾಂಕ್, ಮೂಡಾ ಶಾಖೆ, ಮೈಸೂರು,	1,000

ನಮ್ಮ ಅರೆಭಾಷೆ ಗೌಡರ "ಕೊಡಗು ಸಂಗಾತಿ"ಗೆ ಶುಭಾಶಯಗಳು

- ಕೋಳಿಬೈಲು ನಾಣಯ್ಯ (ಮಾಜಿ ಯೋಧ) ಭಾರತದ ಟೆಲಿಫೋನ್ ಕಾರ್ಖಾನೆ ಬೆಂಗಳೂರು.
- ಕೋಳಿಬೈಲು ಪಾರ್ವತಿ ನಾಣಯ್ಯ (ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್) ಬೆಂಗಳೂರು.
- ಕೋಳಿಬೈಲು ಕೆ ಎನ್. ಗಿರೀಶ್ ಕುಮಾರ್, ಬಿ ಇ., ಬೆಂಗಳೂರು.
- ಕೋಳಿಬೈಲು ಕೆ. ಎನ್. ಬೀನಾ, ಬಿ.ಕಾಂ., ಬೆಂಗಳೂರು.
- ಕೋಳಿಬೈಲು ಕೆ. ಎನ್. ಕೃತಿಕಾ, ಬೆಂಗಳೂರು.

ವಿಳಾಸ : ಫೋನ್ ! 3349731

ನಂ. 288; ಎಂ ಎಸ್. ಆರ್. ನಗರ, ಮತ್ತಿಕೆರೆ, ಬೆಂಗಳೂರು.

K.R.N.N. 240

ಶುಭಾಶಯಗಳು

ಜನ ಶಕ್ತಿಯನ್ನು ಸಂಘಟಿಸುವ ನಿಟ್ಟಿನಲ್ಲಿ ಹೊರತರಲಾಗಿರುವ ಈ ನಿಮ್ಮ ಪ್ರಯತ್ನಕ್ಕೆ ಮತ್ತು ಜನಾಂಗದ ಪ್ರಪ್ರಥಮ ಪಾಕ್ಷಿಕ ಪತ್ರಿಕೆಯಾದ "ಕೊಡಗು ಸಂಗಾತಿ"ಗೆ ನಮ್ಮ ಶುಭಾಶಯಗಳು.

ಶ್ರೀ ತಡಿಯಪ್ಪನ ಪೂವಯ್ಯ ಕುಮಾರ ಜಯ ಮತ್ತು
ಶ್ರೀಮತಿ ಪದ್ಮಾವತಿ ಕುಮಾರ ಜಯ ಹಾಗೂ ಮಕ್ಕಳಾದ
ಕು|| ಭವ್ಯ ಕುಮಾರ ಜಯ,
ಕು|| ಕಿಶೋರ್ ಕುಮಾರ ಜಯ

ನಂ. 122, ಎಲ್.ಐ.ಜಿ., 2ನೇ ಹಂತ, ಕುವೆಂಪುನಗರ, ಮೈಸೂರು.

ಒಮ್ಮೆ ಭೇಟಿ ಕೊಡಿ ! ಒಮ್ಮೆ ಭೇಟಿ ಕೊಡಿ !! ಒಮ್ಮೆ ಭೇಟಿ ಕೊಡಿ !!!

ಮೋಹಕ ಬಾರ್ ಅಂಡ್ ರೆಸ್ಟೋರೆಂಟ್

ಕಾಳಿದಾಸ ರಸ್ತೆ, ವಿ. ವಿ. ಮೊಹಲ್ಲಾ, ಮೈಸೂರು-2.

Printed by M.K. Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12
Published at Mysore Editor PATTADA. P. SHEELAMANI, 322, Bhogadi Circle, Hinkal Post, Mysore-570017.